# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–34, ಶ್ರೀ ಶುಭಕೃತ್‌ನಾಮ ಸಂವತ್ಸರ, ಜ್ಯೇಷ್ಠ ಮಾಸ ಜೂನ್–2022, ಸಂಚಿಕೆ–3, ಪುಟಗಳು–32, ಬೆಲೆ ರೂ.–15/–


## ಜಗದ್ಗುರುಗಳಿಗೆ ಮಹಾಸಭಾದಿಂದ ಅಭೂತಪೂರ್ವ ಗುರುವಂದನೆ









ಶಿರಸಿಯಲ್ಲಿ

ಕಾರ್ಯಕಾರಿಣಿ ಸಭೆ




ವಿಪ್ರಸಮಾವೇಶ





ಶೃಂಗೇರಿ ಶಾರದಾ ಪೀಠದ ಜಗದ್ಗುರು
ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ
ಬೆಂಗಳೂರು ಪುರಪ್ರವೇಶ



ಜಗದ್ಗುರುಗಳಿಂದ ಕೃಷ್ಣಯಜುರ್ವೇದ 13ನೇ ಸಂಪುಟ ಲೋಕಾರ್ಪಣೆ




ಗದಗಲ್ಲಿ ಬೈಕ್ ರ್‍ಯಾಲಿಯಲ್ಲಿ ವಿಪ್ರ ಯುವಕರು.

## ಬೆಳಗಾವಿಯಲ್ಲಿ ಶೋಭಾಯಾತ್ರೆ





ವೈದ್ಯ ವಿಭಾಗದ ಉದ್ಘಾಟನೆ



ಚಾಮರಾಜನಗರದ ಹೆಬ್ಬಸೂರಿನಲ್ಲಿ ಅಭಿನಂದನಾ ಕಾರ್ಯಕ್ರಮ



ಶಿರಸಿ ವಿಪ್ರ ಸಮಾವೇಶದಲ್ಲಿ ಅಧ್ಯಕ್ಷರಿಗೆ ಸನ್ಮಾನ

ಶಿರಸಿಯಲ್ಲಿ ಮಹಾಸಭೆಯ 2ನೇ ಕಾರ್ಯಕಾರಿಣಿ ಸಭೆ





**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ, ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್. ನಾಯಕ್**

ಸಂಘಟನಾ ಕಾರ್ಯದರ್ಶಿ
**ಡಾ|| ಬಿ.ಎಸ್. ರಾಘವೇಂದ್ರ ಭಟ್**

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು
**ಡಾ|| ಎಂ.ಕೆ. ಶ್ರೀಧರ್**

ಗೌರವ ಸಲಹೆಗಾರರು
**ಎಂ.ಕೆ. ಭಾಸ್ಕರರಾವ್**
**ಡಾ|| ಎಂ. ಸೂರ್ಯಪ್ರಸಾದ್**

ಸಮಿತಿ ಸದಸ್ಯರು
**ಜ್ಯೋತಿಷಿ ವಿ|| ಡಾ| ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 050. ದೂ. : 26606061.

# ನಲ್ನುಡಿ

**ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ।**
**ಶ್ರದ್ಧಯಾ ಪರಮೋಪೇತಾಃ ತೇ ಮೇ ಯುಕ್ತತಮಾ ಮತಾಃ॥**

**ಭಗವದ್ಗೀತಾ 12.2**

ಯಾರು ನನ್ನಲ್ಲಿ ಮನಸ್ಸನ್ನು ಇಟ್ಟು ಸದಾಕಾಲವೂ ಪರಮಶ್ರದ್ಧೆಯಿಂದ ಉಪಾಸನೆ ಮಾಡುತ್ತಾರೋ ಅವರು ಅತ್ಯಂತ ಯೋಗ್ಯರೆಂದು ನನ್ನ ಮತ.

ಅರ್ಜುನನು ಶ್ರದ್ಧೆಯು ವಿಷಯವಾಗಿ ಯಾರು ಯೋಗವನ್ನು ತಿಳಿದವರು ಪರಮಭಕ್ತರು ಎಂದು ಪ್ರಶ್ನಿಸಿದಾಗ, ಶ್ರೀಕೃಷ್ಣನು ಬಹಳ ಸರಳವಾಗಿ ಹೀಗೆ ಉತ್ತರಿಸುತ್ತಾನೆ.

ವಿಶ್ವರೂಪ ದರ್ಶನ ಮಾಡಿದ ಅರ್ಜುನನಿಗೆ ಒಂದು ಸಂದೇಹ ಬಂದಿತು. ನಾನು ಯಾವಾಗಲೂ ಶ್ರೀಕೃಷ್ಣ ಪರಮಾತ್ಮನ ಜೊತೆಯಲ್ಲಿರುವವನು, ಅವನ ಸಗುಣ ರೂಪವನ್ನು ಯಾವಾಗಲೂ ಮನದಲ್ಲಿ ಕಾಣುತ್ತಿರುವವನು. ಆದರೆ ಬೇರೆ ಭಕ್ತರಿಗೆ ಈ ರೀತಿಯ ಸಗುಣರೂಪ ದರ್ಶನ ಭಾಗ್ಯವಿಲ್ಲ. ಅವರು ಪರಮಾತ್ಮನನ್ನು ನಿರಾಕಾರಮೂರ್ತಿಯಾಗಿ ಪೂಜಿಸುತ್ತಾರೆ. ಇವರಿಬ್ಬರಲ್ಲಿ ಯಾರು ಶ್ರೇಷ್ಠರು ಎಂಬುದೇ ಸಂದೇಹ. ಆದರೆ ಶ್ರೀಕೃಷ್ಣ ನೀಡಿದ ಉತ್ತರ ಯಾರು ಇಂದ್ರಿಯಗಳನ್ನು ವಶಪಡಿಸಿಕೊಂಡು ಶಾಶ್ವತ ಅಚಲ, ಅವಿನಾಶಿಯಾದ ನನ್ನನ್ನು ಒಂದೇ ಭಾವದಿಂದ ಆರಾಧಿಸಿ, ಸಮಸ್ತ ಜೀವಿಗಳ ಹಿತಕ್ಕಾಗಿ ಶ್ರಮಿಸುವ ಮತ್ತು ಎಲ್ಲರಲ್ಲೂ ಸಮಾನಭಾವನೆಯನ್ನು ಹೊಂದಿರುವ ಭಕ್ತರಿಗೆ ನಾನು ಪ್ರಿಯನಾದವನು ಎಂದು ವಿವರಿಸುತ್ತಾನೆ. ಕೃಷ್ಣನು 19ನೇ ಅಧ್ಯಾಯದಲ್ಲಿ ಮೂರು ರೀತಿಯ ಶ್ರದ್ಧೆಯ ಬಗ್ಗೆ ವಿವರಿಸುತ್ತಾನೆ. ಅವೇ ಸಾತ್ವಿಕ, ರಾಜಸಿಕ ಮತ್ತ ತಮಸಿಕ. ಜನರ ಅಂತಃಕರಣಕ್ಕೆ ತಕ್ಕಂತೆ ಈ ಶ್ರದ್ಧೆಗಳು ಅವರ ಸ್ವಭಾವವನ್ನು ನಿರ್ಧರಿಸುತ್ತವೆ. ಸಾತ್ವಿಕ ಶ್ರದ್ಧೆಯುಳ್ಳವರು ದೇವತೆಗಳನ್ನು, ಸಾಧುಗಳನ್ನು, ಪರೋಪಕಾರಿಗಳನ್ನು ಪೂಜಿಸಿ ಸದಾ ಒಳ್ಳೆಯ ವಿಚಾರಗಳನ್ನೇ ಚಿಂತಿಸುತ್ತಾರೆ. ಅವರು ತಿನ್ನುವ ಸಾತ್ವಿಕ ಅಹಾರವು ಆಯಸ್ಸು, ಬಲ, ಸತ್ವಗುಣ, ಆರೋಗ್ಯ, ಸುಖ–ಸಂತೋಷಗಳನ್ನು ಹೆಚ್ಚಿಸುತ್ತದೆ. **(ಆಹಾರ ಶುದ್ಧೌ ಸತ್ವಶುದ್ಧಿಃ),** ಆದ್ದರಿಂದ ನಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ ಶ್ರದ್ಧೆ ಇರಬೇಕು. ತೈತ್ತಿರಿಯೋಪನಿಷತ್ತಿನ ವಾಕ್ಯದಂತೆ ಶ್ರದ್ಧೆಯಿಂದ ಸಾತ್ವಿಕರಿಗೆ, ಸೂಕ್ತ ಕಾಲದಲ್ಲಿ, ಸೂಕ್ತ ಸ್ಥಳದಲ್ಲಿ ದಾನ ಮಾಡಬೇಕು **(ಶ್ರದ್ಧಯಾ ದೇಯಮ್। ದೇಶೇ ಕಾಲೇಚ ಪಾತ್ರೇಚ ತದ್ದಾನಂ ಸಾತ್ವಿಕಂ ಮತಂ।),** ನಾವು ಮಾಡುವ ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕತೆ, ಜೀವನದಲ್ಲಿ ಶ್ರದ್ಧೆ ನಮ್ಮನ್ನು ಉನ್ನತ ಸ್ಥಾನಕ್ಕೆ ಏರಿಸುತ್ತದೆ. ಶ್ರದ್ಧೆಯಿಂದ ಪರಮಗತಿಯನ್ನು ತಲುಪುತ್ತೇವೆ. **(ಶ್ರದ್ಧಾ ಹಿ ಪರಮೋಗತಿಃ।).**

## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಪರಮ ಪುರುಷಾರ್ಥ

-ಸ್ವಾಮಿ ಶಿವಪ್ರಕಾಶಾನಂದ ಸರಸ್ವತೀ

ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಎನ್ನುವ ನಾಲ್ಕು ಪುರುಷಾರ್ಥಗಳಲ್ಲಿ ಮೋಕ್ಷವೇ ಶ್ರೇಷ್ಠವಾಗಿದೆ. ಹಾಗಾಗಿ ಮೋಕ್ಷವನ್ನು ಪರಮಪುರುಷಾರ್ಥ ಎನ್ನುವರು. ಮನುಷ್ಯನು ಮೋಕ್ಷವನ್ನೇ ತನ್ನ ಗುರಿಯನ್ನಾಗಿಸಬೇಕು ಎಂದು ಶಾಸ್ತ್ರವೇನೂ ಯಾರನ್ನೂ ನಿರ್ಬಂಧಿಸುವುದಿಲ್ಲ. ಆದರೆ ನಮ್ಮ ಮನಸ್ಸನ್ನು ಸರಿಯಾಗಿ ಪರಿಶೀಲಿಸಿದರೆ ಮೋಕ್ಷವೇ ನಮ್ಮ ಜೀವನದ ಉದ್ದೇಶ್ಯವಾಗಿರಬೇಕೆಂಬುದು ತಿಳಿದುಬರುತ್ತದೆ.

ಲೋಕದಲ್ಲಿ ಪ್ರತಿಯೊಬ್ಬನೂ ತನಗೆ ಸುಖಬೇಕೆಂದು ಬಯಸುತ್ತಾನೆ, ಸುಖದ ಇಚ್ಛೆ ಮನುಷ್ಯನಿಗೆ ಸ್ವಾಭಾವಿಕವಾಗಿದೆ. ಯಾರೂ ನನಗೆ ದುಃಖಬೇಕೆಂದು ಹೇಳುವುದಿಲ್ಲ. ನನ್ನ ದುಃಖಗಳು ದೂರವಾಗಬೇಕು ಹಾಗೂ ಸುಖವು ಸಿಗಬೇಕು ಎಂಬುದೇ ಪ್ರತಿಯೊಬ್ಬನ ಮನೋಕಾಮನೆಯಾಗಿರುತ್ತದೆ.

ನಾವು ಯಾವುದೇ ವಸ್ತುವನ್ನಾದರೂ ಸುಖಕ್ಕಾಗಿಯೇ ಬಯಸುತ್ತೇವೆ. ಯಾವುದಾದರೂ ವಸ್ತುವಿನಿಂದ ಸುಖವು ಸಿಗದಿದ್ದರೆ ಅದರ ಮೇಲೆ ನಮಗೆ ಪ್ರೀತಿಯಿರುವುದಿಲ್ಲ. ಭೌತಿಕ ವಸ್ತುಗಳ ಮೇಲಿನ ನಮ್ಮ ಪ್ರೀತಿಗೆ ಅವುಗಳಿಂದ ಸಿಗುವ ಸುಖವೇ ಕಾರಣ. ಹಾಗಾಗಿ ಮುಖ್ಯವಾಗಿ ಎಲ್ಲರೂ ಸುಖವನ್ನೇ ಬಯಸುವರು ಎನ್ನುವುದು ಸತ್ಯವಾದ ಮಾತು.

ನಾವು ಇಚ್ಛಿಸುವ ಸುಖವು ಯಾವ ರೀತಿಯದ್ದಾಗಿದೆ ಎನ್ನುವುದನ್ನು ನಾವು ಪರಿಶೀಲಿಸಬೇಕು. ಒಬ್ಬನು ಬಟ್ಟೆ ಖರೀದಿಸಲು ಅಂಗಡಿಗೆ ಹೋದನು. ಆದರೆ ಯಾವ ಬಟ್ಟೆ? ಎಷ್ಟು ಅಳತೆಯ ಬಟ್ಟೆ? ಎನ್ನುವುದನ್ನು ಅವನು ತಿಳಿದಿರಲಿಲ್ಲ. ಹಾಗಾಗಿ ಅವನು ಸರಿಯಾದ ಬಟ್ಟೆಯನ್ನು ಕೊಳ್ಳದೆ ಹಿಂತಿರುಗಬೇಕಾಯಿತು. ನಮಗೆ ಬೇಕಾಗಿರುವ ವಸ್ತುಯಾವುದು, ಅದರ ಪರಿಮಾಣ ಏನು ಎನ್ನುವುದನ್ನು ಮೊದಲು ತಿಳಿದುಕೊಳ್ಳಬೇಕು. ತದನಂತರ ಅದನ್ನು ಪಡೆಯಲು ಸರಿಯಾದ ಮಾರ್ಗವೇನು ಎನ್ನುವುದನ್ನು ತಿಳಿಯಬೇಕು. ಅನಂತರ ಸರಿಯಾದ ಮಾರ್ಗದಲ್ಲಿ ಅದನ್ನು ಪಡೆದು ಕೊಳ್ಳಲು ಪ್ರಯತ್ನಿಸಬೇಕು. ಸಾಮಾನ್ಯವಾಗಿ ಬಾಹ್ಯ ವಸ್ತುಗಳಾದ ಬಟ್ಟೆ ಇತ್ಯಾದಿಗಳ ವಿಷಯದಲ್ಲಿ ಈ ಕ್ರಮವನ್ನು ಎಲ್ಲರೂ ಅನುಸರಿಸುವರು. ಆದರೆ ಜೀವನದ ಪ್ರಮುಖ ಲಕ್ಷ್ಯವಾದ ಸುಖದ ಬಗ್ಗೆ ಈ ವಿಷಯಗಳನ್ನು ಹೆಚ್ಚಿನವರು ಯೋಚಿಸುವುದಿಲ್ಲ.

ಎಲ್ಲರೂ ತಮಗೆ ಶಾಶ್ವತ ಎಂದರೆ ನಿತ್ಯವಾದ ಸುಖ ಬೇಕು ಎಂದು ಇಚ್ಛಿಸುತ್ತಾರೆ. ಯಾರೂ ಕ್ಷಣಿಕಸುಖದಿಂದ ತೃಪ್ತಿಹೊಂದುವುದಿಲ್ಲ. ಹೊರಗಿನ ವಿಷಯಗಳಿಂದ ಸಿಗುವ ಸುಖವು ಅನಿತ್ಯವಾಗಿರುತ್ತದೆ. ಯಾವುದೇ ಬಾಹ್ಯವಸ್ತು ಶಾಶ್ವತವಲ್ಲ. ಹಾಗಿದ್ದಲ್ಲಿ ಅದರಿಂದ ಸಿಗುವ ಸುಖ ಹೇಗೆ ನಿತ್ಯವಾಗಿರಲು ಸಾಧ್ಯ? ಹಾಗಾಗಿ ನಾವು ಬಯಸುವಂತಹ ಸುಖವು ವಿಷಯ ಸುಖಕ್ಕಿಂತ ವಿಲಕ್ಷಣವಾದ ನಿತ್ಯಸುಖ ಎನ್ನುವುದು ಸಿದ್ಧವಾಗುತ್ತದೆ.

ನಮ್ಮ ಸುಖವು ನಿರಪೇಕ್ಷವಾಗಿರಬೇಕು. ಬೇರೊಂದು ನಿಮಿತ್ತವನ್ನು ಆಶ್ರಯಿಸಿರುವ ಸುಖವು ನಿತ್ಯವಾಗಿರಲಾರದು. ಒಬ್ಬ ನೌಕರನ ಸುಖವು ಪ್ರಾಯಶಃ ತನ್ನ ಮಾಲಿಕನ ಮನಃಸ್ಥಿತಿಯನ್ನು ಅವಲಂಬಿಸಿರುತ್ತದೆ. ಮಾಲಿಕನು ಸಂತೋಷದಿಂದಿರುವ ವರೆಗೆ ಅವನು ನೌಕರನ ಮುಂದೆ ಸ್ನೇಹದಿಂದ ನಡೆದುಕೊಳ್ಳಬಹುದು. ಮಾಲಿಕನ ಮನಸ್ಸಿನಲ್ಲಿ ಅಸಮಾಧಾನವುಂಟಾದಾಗ ನೌಕರನು ಕಷ್ಟಕ್ಕೊಳಗಾಗುವನು. ಈ ರೀತಿಯ ಸುಖವು ಸಾಪೇಕ್ಷವಾಗಿರುತ್ತದೆ. ಬಾಹ್ಯ ನಿಮಿತ್ತಗಳನ್ನು ಆಶ್ರಯಿಸದಂತಹ ಸುಖವೇ ನಿರಪೇಕ್ಷಸುಖ. ಅದು ಬಾಹ್ಯವಸ್ತುಗಳಿಂದ ಸಿಗಲಾರದು.

ನಾವು ಇಚ್ಛಿಸುವ ಸುಖದ ಇನ್ನೊಂದು ಸ್ವಭಾವವೇನೆಂದರೆ ಅದು ನಿರತಿಶಯವಾಗಿರಬೇಕು. ನಮಗೆ ಸಿಕ್ಕಿದ ಸುಖಕ್ಕಿಂತ ಇನ್ನೂ ಹೆಚ್ಚಿನ ಸುಖವೊಂದಿದ್ದರೆ ಅದು ಸಾತಿಶಯ ಎನ್ನಲ್ಪಡುವುದು. ಆಗ ಆ ಹೆಚ್ಚಿನ ಸುಖದ ಬಯಕೆ ನಮ್ಮನ್ನು ಕಾಡುತ್ತದೆ. ಹಾಗಿರುವಾಗ ನಮ್ಮಲ್ಲಿ ಅತೃಪ್ತಿ ಉಂಟಾಗಿ ಅಶಾಂತಿಗೆ ಕಾರಣವಾಗುತ್ತದೆ. ಹಾಗಾಗಿ ನಮಗೆ ಬೇಕಾಗಿರುವ ಸುಖವು ನಿರತಿಶಯ ಸುಖವೇ ಹೊರತು ಸಾತಿಶಯವಾದ ವಿಷಯಸುಖವಲ್ಲ.

ಹೀಗೆ ವಿಚಾರ ಮಾಡಿ ನೋಡಿದಾಗ ನಾವು ಜೀವನದಲ್ಲಿ ವಾಸ್ತವವಾಗಿ ಏನನ್ನು ಹುಡುಕಾಡುತ್ತಿರುವೆವು ಎನ್ನುವುದು ಸ್ಪಷ್ಟವಾಗುತ್ತದೆ. ನಮ್ಮೆಲ್ಲರಿಗೂ ಬೇಕಾಗಿರುವುದು ನಿತ್ಯ, ನಿರಪೇಕ್ಷ, ನಿರತಿಶಯವಾದ ಸುಖವೇ. ಈ ಸುಖದ ಪ್ರಾಪ್ತಿಯೇ ಶಾಸ್ತ್ರದಲ್ಲಿ ಮೋಕ್ಷ ಎಂದು ಕರೆಯಲ್ಪಡುತ್ತದೆ. ಹಾಗಾಗಿ ಮೋಕ್ಷವೇ ಪರಮಪುರುಷಾರ್ಥ.

ನಿತ್ಯ, ನಿರಪೇಕ್ಷ, ನಿರತಿಶಯವಾದ ಸುಖವು ಬಾಹ್ಯವಸ್ತುಗಳಿಂದ ದೊರಕಲಾರದು ಎನ್ನುವುದೂ ವಿಚಾರದಿಂದ ನಿಶ್ಚಿತವಾಗುತ್ತದೆ. ಹಾಗಾದರೆ ಈ ಸುಖವು ಎಲ್ಲಿ ಸಿಗುತ್ತದೆ? ಅದನ್ನು ಪಡೆಯಲು ಮಾರ್ಗವೇನು ಎನ್ನುವುದನ್ನು ಭಗವದ್ಗೀತೆ, ಉಪನಿಷತ್ತು ಇತ್ಯಾದಿ ಶಾಸ್ತ್ರಗಳು ನಮಗೆ ತಿಳಿಸುತ್ತವೆ.

**"ಯೋವೈಭೂಮಾತತ್ಸುಖಮ್, ನ ಅಲ್ಪೇಸುಖಮಸ್ತಿ. ಭೂಮಾ ಏವಸುಖಮ್"**

**ಎನ್ನುವ ಛಾಂದೋಗ್ಯೋಪನಿಷತ್ತು ಅನಂತವಾದ ಪರಮಾತ್ಮನ ಸ್ವರೂಪವೇ ಸುಖ.**

**ಪರಮಾತ್ಮ ಸಾಕ್ಷಾತ್ಕಾರದ ಮೂಲಕ ಅದನ್ನು ಕಂಡುಕೊಳ್ಳುವುದೇ ಮೋಕ್ಷಕ್ಕೆ ದಾರಿ ಎಂದು ತಿಳಿಸುತ್ತದೆ.**

**ಅಲ್ಪವಾದ ಬಾಹ್ಯವಿಷಯಗಳಲ್ಲಿ ಸುಖವೆಲ್ಲಿದೆ? ಅವುಗಳಲ್ಲಿ ಸುಖದ ತೋರಿಕೆ ಮಾತ್ರ ಇರುತ್ತದೆ. ಆತ್ಮನ ಸ್ವರೂಪವು ದೇಶ, ಕಾಲ ಹಾಗೂ ವಸ್ತುಗಳಿಂದ ಸೀಮಿತವಾಗದೆ ಅನಂತವಾಗಿದೆ. ಅದುವೇ ವಾಸ್ತವವಾದ ಸುಖ ಸ್ವರೂಪ. ಅದು ನಮ್ಮ ಆತ್ಮವೇ ಆದ್ದರಿಂದ ಅದಕ್ಕಾಗಿ ಬಾಹ್ಯ ವಸ್ತುಗಳಂತೆ ಹೊರಗೆ ಹುಡುಕಾಡಿ ಪ್ರಯೋಜನವಿಲ್ಲ. ಅದನ್ನು ವೇದಾಂತಗಳು ಉಪದೇಶಿಸುವ ಆತ್ಮಜ್ಞಾನದ ಮೂಲಕ ನಮ್ಮೊಳಗೆಯೇ ಕಂಡುಕೊಳ್ಳಬೇಕು.**

# ಅಧ್ಯಕ್ಷರ ನುಡಿ



ಆತ್ಮೀಯ ವಿಪ್ರಬಂಧುಗಳೇ,

ನಮಸ್ಕಾರಗಳು.

ಏಪ್ರಿಲ್ ತಿಂಗಳಿನಂತೆ ಮೇ ತಿಂಗಳು ಕೂಡ ಮಹಾಸಭೆ ಹಾಗೂ ಸಂಘಟನೆಯ ವಿಷಯದಲ್ಲಿ ಮಹತ್ವದ್ದು ಎಂದೇ ಹೇಳಬಹುದು.

ಮೇ ತಿಂಗಳಲ್ಲಿ ಕೈಗೊಂಡ ಉತ್ತರ ಕರ್ನಾಟಕ ಪ್ರವಾಸ ಹಲವು ಕಾರಣಗಳಿಗೆ ಮಹತ್ವವಾದುದೆಂದು ಹೇಳಬಹುದು. ದಿನಾಂಕ ಏಳರಂದು ಬೆಳಿಗ್ಗೆ 10.30ಕ್ಕೆ ಹಾವೇರಿ ಪಟ್ಟಣವನ್ನು ತಲುಪಿ ಅಲ್ಲಿ ಸಂಘಟನಾ ಸಭೆಯಲ್ಲಿ ಪಾಲ್ಗೊಂಡು ನಂತರ ಗದಗ್‌ನತ್ತ ಪ್ರವಾಸ ಬೆಳೆಸಿದೆವು. ಪ್ರವಾಸದ ಮಾರ್ಗ ಮಧ್ಯದಲ್ಲಿ ಲಕ್ಷ್ಮೇಶ್ವರಕ್ಕೆ ಭೇಟಿಕೊಟ್ಟು ಅಲ್ಲಿನ ಪುರಾತನ ದೇವಾಲಯ ಸೋಮೇಶ್ವರಕ್ಕೆ ಭೇಟಿ ಕೊಟ್ಟೆವು. ಅಲ್ಲಿನ ಸ್ಥಳೀಯ ವಿಪ್ರ ಮುಖಂಡರ ಹಠಾತ್ ಕೋರಿಕೆಯ ಮೇರೆಗೆ ಲಕ್ಷ್ಮೇಶ್ವರಕ್ಕೆ ಭೇಟಿ ಕೊಟ್ಟು ಅಲ್ಲಿನ ವಿಪ್ರ ಪ್ರಮುಖರೊಡನೆ ಸಂಘಟನೆಯ ಬಗ್ಗೆ ಚರ್ಚಿಸಿದೆವು ಹಾಗೂ ಮಹಾಸಭೆ ಕರ್ನಾಟಕದ ಪ್ರತಿ ಗ್ರಾಮ ಹಾಗೂ ಪಟ್ಟಣಗಳಿಗೆ ತಲುಪುತ್ತಿರುವುದನ್ನು ಕಂಡು ಸಂತೋಷವು ಆಯಿತು.

ನಂತರ ಅಲ್ಲಿಂದ ಗದಗ್ ತಲುಪಿ ಅಲ್ಲಿನ ಖ್ಯಾತ ಕವಿಗಳು, ನಾಟಕಕಾರರು, ಸಾಮಾಜಿಕ ಚಿಂತಕರು ಆಗಿದ್ದ ಹುಯಿಲಗೋಳ ನಾರಾಯಣರಾವ್ ಅವರ ಮನೆಗೆ ಭೇಟಿಕೊಟ್ಟು ನಂತರ ಗದಗ ಜಿಲ್ಲಾ ವಿಪ್ರ ಸಮಾವೇಶದ ಶೋಭಾಯಾತ್ರೆಗೆ ಗದುಗಿನ ವೀರನಾರಾಯಣನ ಸನ್ನಿಧಿಯಿಂದ ಚಾಲನೆ ನೀಡಲಾಯಿತು. ಆ ಶೋಭಾಯಾತ್ರೆ ನಿಜಕ್ಕೂ ಗದಗ ಜಿಲ್ಲಾ ವಿಪ್ರ ಬಳಗದಲ್ಲಿ ಒಂದು ರೀತಿಯ ಸಂಚಲನ ಮೂಡಿಸಿತ್ತು ಎಂದರೆ ಅತಿಶಯೋಕ್ತಿಯಲ್ಲ. ಅಂದು ಹಿರಿಯರು, ಕಿರಿಯರು, ಮಾತೆಯರು ಎಲ್ಲರೂ ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡು ಶೋಭಾ ಯಾತ್ರೆಗೆ ಹೆಚ್ಚಿನ ಮೆರಗನ್ನು ತಂದುಕೊಟ್ಟರು ಹಾಗೂ ಅಲ್ಲಿ ನೆರೆದಿದ್ದ ಪ್ರಮುಖ ಮುಖಂಡರ ಪ್ರಕಾರ ಇಪ್ಪತ್ತು ವರುಷಗಳ ಹಿಂದೆ ಈ ರೀತಿಯ ವಿಪ್ರ ಸಮಾವೇಶ ಗದಗಿನಲ್ಲಿ ಜರುಗಿತ್ತೆಂದು ಅದೇ ಮಾದರಿಯಲ್ಲಿ ಮತ್ತೊಮ್ಮೆ ವಿಪ್ರ ಸಮಾವೇಶ ಜರುಗಿದೆ ಎಂದು ನೆನಪು ಮಾಡಿಕೊಂಡರು.

ಗದಗ ಸಮಾವೇಶದ ನಂತರ ಅಲ್ಲಿಂದ ಹೊರಟು ಮಾರ್ಗ ಮಧ್ಯದಲ್ಲಿ ಅಣ್ಣಿಗೇರಿಯಲ್ಲಿ ವಿಪ್ರ ಮುಖಂಡರ ಭೇಟಿ ಮಾಡಿ, ನಮ್ಮ ಪ್ರಯಾಣವನ್ನು ಹುಬ್ಬಳ್ಳಿಯತ್ತ ಮುಂದುವರೆಸಿದೆವು. ಹುಬ್ಬಳ್ಳಿಯ ಕಾರ್ಯಕ್ರಮ ಸಂಜೆ 7.30ಕ್ಕೆ ಪ್ರಾರಂಭವಾಗ ಬೇಕಿತ್ತು. ಆದರೆ ಗದಗ್ ಜಿಲ್ಲೆಯ ವಿಪ್ರರ ಉತ್ಸಾಹದ ಮುಂದೆ ಸಮಯ ಕಳೆದದ್ದೇ ಗೊತ್ತಾಗಲಿಲ್ಲ ಮತ್ತು ಹುಬ್ಬಳ್ಳಿಯ ಕಾರ್ಯಕ್ರಮ ಪ್ರಾರಂಭವಾದಾಗ ರಾತ್ರಿ 9.30 ಆಗಿತ್ತು. ಹೀಗೆ ಕಾರ್ಯಕ್ರಮ ತಡವಾದಾಗ್ಯೂ ಕೂಡ ಉಪಾಧ್ಯಕ್ಷರಾದ ಪ್ರಮೋದ್ ಮನೋಳಿ ಹಾಗೂ ಧಾರವಾಡದ ವಿಪ್ರ ಬಂಧುಗಳು ಅತ್ಯಂತ ಸಹನೆಯಿಂದ ಸಂಘಟನಾ ಸಭೆಯಲ್ಲಿ ಸರಿಸುಮಾರು ರಾತ್ರಿ 11 ಗಂಟೆಯವರೆಗೆ ಪಾಲ್ಗೊಂಡಿದ್ದು ವಿಶೇಷವೇ ಸರಿ.

ತದನಂತರ ಮರುದಿವಸ ಧಾರವಾಡದ ಮಾಜಿ ಮೇಯರ್‌ರಾದ ಹನುಮಂತ ಡಂಬಲ್ ಅವರ ನೇತೃತ್ವದಲ್ಲಿ ಆಯೋಜಿಸಿದ್ದ, ವಿಪ್ರ ಸಭೆಯಲ್ಲಿ ಪಾಲ್ಗೊಂಡು ಅಲ್ಲಿನ ಜನರನ್ನುದ್ದೇಶಿಸಿ ಮಾತನಾಡಿ ಅಲ್ಲಿಂದ ಬೆಳಗಾಂ ಸಭೆಗೆ ಹೊರಟೆವು. ಧಾರವಾಡದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಂಬಲ್ ಅವರು ಮಹಾಸಭೆಯ ಕಾರ್ಯಚಟುವಟಿಕೆಗಳಿಗೆ ಧಾರವಾಡದಲ್ಲಿ 2000 ಚ.ಅ. ಜಾಗವನ್ನು ಕೊಡುವುದಾಗಿ ವಾಗ್ದಾನ ಮಾಡಿದರು, ಅವರ ಈ ಸಾಮಾಜಿಕ ಕಳಕಳಿಗೆ ಮಹಾಸಭೆ ಅವರನ್ನು ಅಭಿನಂದಿಸುತ್ತದೆ ಹಾಗೂ ಅವರ ಈ ಸೇವಾ ಕೈಂಕರ್ಯ ಹೀಗೆ ಮುಂದುವರಿಯಲಿ ಎಂದು ಆ ಭಗವಂತನಲ್ಲಿ ಬೇಡಿಕೊಳ್ಳುತ್ತೇನೆ.

ಬೆಳಗಾಂನಲ್ಲಿ ವಿಲಾಸ ಜೋಷಿ ಹಾಗೂ ರವೀಂದ್ರ ಶ್ರೀಪಾದ ಮುತಾಲಿಕ್ ಅವರ ನೇತೃತ್ವದಲ್ಲಿ ಬೆಳಗಾಂ ಜಿಲ್ಲೆಯ ವಿಪ್ರ ಸಭಾ ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಲಾಗಿತ್ತು. ಹಾಗೂ ಗದಗಿನಂತೆ ಇಲ್ಲಿಯೂ ಕೂಡ ಹಿರಿಯರು ಕಿರಿಯರು ಎಂದು ಭೇದಭಾವವಿಲ್ಲದೆ ವಿಪ್ರ ಸಮುದಾಯ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದು ಹೆಮ್ಮೆಯ ವಿಷಯವೇ ಸರಿ.

ಅಷ್ಟೇ ಅಲ್ಲದೆ ಬೆಳಗಾಂನ ಈ ಸಭೆಯಲ್ಲಿ ಮಹಾಸಭೆಯ ಕೈಗಾರಿಕಾ ವಿಭಾಗವು ಉದ್ಘಾಟನೆಗೊಂಡು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳ ಬೇಕಾದ ಕಾರ್ಯಕ್ರಮದ ಬಗ್ಗೆ ಚರ್ಚಿಸಲಾಯಿತು.

ಇದೇ ಸಂದರ್ಭದಲ್ಲಿ ಮಹಾಸಭೆಯ ಬೆಳಗಾಂ ವಿಭಾಗದ ಕಛೇರಿ ಯನ್ನು ವಿಲಾಸ ಜೋಷಿಯವರ ಕಟ್ಟಡದಲ್ಲಿಯೇ ಪ್ರಾರಂಭಿಸಲಾಯಿತು. ಹಾಗೂ ಈ ಕಛೇರಿಗೆ ಯಾವುದೇ ಬಾಡಿಗೆಯನ್ನು ಪಡೆಯದೆ ನಡೆಸಿ ಕೊಂಡು ಹೋಗುವುದಾಗಿ ವಿಲಾಸ ಜೋಷಿಯವರು ಮಹಾಸಭೆಗೆ ಭರವಸೆ ಯನ್ನು ಕೊಟ್ಟರು. ಇದು ವಿಲಾಸ ಜೋಷಿ ಯವರಿಗೆ ಮಹಾಸಭೆಯ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ ಎಂದರೆ ತಪ್ಪಲ್ಲ.

ಹೀಗೆ ಸಭೆಗಳ ಮೇಲೆ ಸಭೆ ಮತ್ತು ಪ್ರವಾಸ ಒಂದು ಕಡೆಯಾದರೆ, ಮಹಾಸಭೆಯ ಎರಡನೇ ಕಾರ್ಯಕಾರಿಣಿ ಸಭೆ ಮೇ 22ರಂದು ಶಿರಸಿಯಲ್ಲಿ ಏರ್ಪಡಿಸಲಾಗಿತ್ತು. ಹಾಗೂ ಅಂದೇ ವಿಪ್ರ ಸಮಾವೇಶ ವನ್ನು ಎರ್ಪಡಿಸಲಾಗಿ, ಅಲ್ಲಿನ ಸ್ಥಳೀಯರ ಹಾಗೂ ರಾಜಕೀಯ ಮುಖಂಡರ ಪ್ರಶಂಸೆಗೆ ಪಾತ್ರವಾಯಿತು. ಈ ಸಭೆಯು ಯಶಸ್ವಿ ಗೊಳಿಸಲು ಹಗಲಿರುಳು ಶ್ರಮಿಸಿದ ಶಶಿಭೂಷಣ ಹೆಗಡೆ ಹಾಗೂ ಅಲ್ಲಿನ ಹಲವು ಮುಖಂಡರುಗಳಿಗೆ ಅಭಿನಂದನೆಗಳು. ಹಾಗೂ ಈ ಸಭೆ ಶಿರಸಿಯ ಇತಿಹಾಸದಲ್ಲಿಯೇ ನಡೆದ ಪ್ರಪ್ರಥಮ ವಿಪ್ರ ಸಭೆ ಎಂಬುದು ಇನ್ನೊಂದು ಗಮನಾರ್ಹ ಅಂಶ.

ಹೀಗೆ ಮಹಾಸಭೆಯ ಚಟುವಟಿಕೆಯು ಕರ್ನಾಟಕದಾದ್ಯಂತ ಪಸರಿಸುತ್ತಿರುವುದು ನಿಜಕ್ಕೂ ಸಂತಸದ ವಿಷಯ ಎಂದು ಹೇಳುತ್ತಾ ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ವಿವರಗಳೊಂದಿಗೆ ಭೇಟಿಯಾಗೋಣ.

**॥ ಸರ್ವೇಜನಾಃ ಸುಖಿನೋಭವಂತು ॥**

**ವಂದನೆಗಳೊಂದಿಗೆ,**

**ಅಶೋಕ ಹಾರನಹಳ್ಳಿ**
**ಮಹಾಸಭಾಧ್ಯಕ್ಷರು.**

## ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ಜೂನ್ 5, ವಿಶ್ವ ಪರಿಸರ ದಿನ. ಪ್ರಪಂಚಾದ್ಯಂತ ಪರಿಸರ ವಿಜ್ಞಾನಿಗಳು ಪರಿಸರ ಸ್ನೇಹಿಗಳು, ಸರ್ಕಾರಗಳ, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಈ ದಿನವನ್ನು ವಿಜೃಂಭಣೆಯಿಂದ ವೈವಿಧ್ಯಮಯ ರೀತಿಯಲ್ಲಿ ಆಚರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಜಗತ್ತಿನ ಪರಿಸ್ಥಿತಿಯನ್ನು ನೋಡಿದರೆ ನಮಗೆ ಆಘಾತವಾಗುತ್ತದೆ. ಪ್ರಾಕ್ತನಶಾಸ್ತ್ರಜ್ಞರ ಪ್ರಕಾರ ಮೂರು ಲಕ್ಷ ವರ್ಷಗಳ ಹಿಂದೆ ಜನಿಸಿದ ಮಾನವ ತನ್ನ ಸ್ವಾರ್ಥಕ್ಕೋಸ್ಕರ ಜಗತ್ತನ್ನೇ ಹಾಳುಗೆಡವಿದ್ದಾನೆ. 27 ಕೋಟಿ ವರ್ಷಗಳಿಂದ ಬಾಳುತ್ತಿರುವ ಪಶು, ಪಕ್ಷಿ, ಸಸ್ಯಸಂಕುಲದಿಂದ ನಮಗೆ ಏನೂ ತೊಂದರೆಯಾಗಿಲ್ಲ. ಪ್ರಕೃತಿ ಸಂಪನ್ಮೂಲಗಳ ವಿಪರೀತ ಬಳಕೆಯಿಂದಾಗಿ ಜಾಗತಿಕ ತಾಪಮಾನ ಹೆಚ್ಚಿ, ಸಮುದ್ರಗಳ ಮಟ್ಟ ಏರುತ್ತಿದೆ. ಉತ್ತರ-ದಕ್ಷಿಣ ಧ್ರುವಗಳ, ಹಿಮಾಲಯದ ನೀರ್ಗಲ್ಲುಗಳು ಕರಗುತ್ತಿವೆ. ವಾಹನಗಳಿಂದ ಹೊರಹೊಮ್ಮುತ್ತಿರುವ ಇಂಗಾಲ, ಕ್ಲೋರೋ ಫ್ಲೋರೋ ಕಾರ್ಬನ್‌ಗಳು ಇಡೀ ವಾತಾವರಣವನ್ನೇ ಕಲುಷಿತಗೊಳಿಸಿ, ಓಝೋನ್ ಪದರ ನಾಶವಾಗುತ್ತಿದೆ. ಕಾರ್ಖಾನೆಗಳಿಂದ ಬರುತ್ತಿರುವ ವಿಷ ದ್ರಾವಣಗಳು ನದಿ-ಸಮುದ್ರಗಳ ನೀರನ್ನು ಹಾಳುಗೆಡವಿ ಜಲಚರಗಳ ಜೀವಕ್ಕೆ ಅಪಾಯ ತಂದೊಡ್ಡಿವೆ. ನದೀ ನೀರು ಕುಡಿಯಲು ಅಸಮರ್ಥವಾಗಿದೆ. ಕಾಂಕ್ರೀಟ್ ಕಟ್ಟಡಗಳ ನಿರ್ಮಾಣಕ್ಕಾಗಿ ಸಹಜ ಅರಣ್ಯಗಳನ್ನು ತೆರವುಗೊಳಿಸುತ್ತಿರುವುದರಿಂದ ಕಾಡುಪ್ರಾಣಿಗಳಿಗೆ ವಾಸಿಸಲು ಜಾಗವಿಲ್ಲದೇ ಹಳ್ಳಿ-ನಗರಗಳಿಗೆ ನುಗ್ಗಿ ಪ್ರಾಣಿ-ಮನುಷ್ಯ ಸಂಘರ್ಷವಾಗುತ್ತಿದೆ. ಹವಾಮಾನ ವೈಪರೀತ್ಯದಿಂದಾಗಿ, ಆಮ್ಲಮಳೆ, ಜಲಪ್ರವಾಹ, ಉಷ್ಣಾಂಶ ಏರುವಿಕೆ ಉಂಟಾಗುತ್ತಿದೆ. ಪರಿಸರ ಸಮತೋಲನ, ಆಹಾರ ಸರಪಳಿ ದಿಕ್ಕು ತಪ್ಪಿದೆ. ವ್ಯಾಸರು ಮಹಾಭಾರತದಲ್ಲಿ ಭೂಮಿಯ ಯೌವನ ಕ್ಷೀಣಿಸಿತು ಎಂದು ಘೋಷಿಸಿದ್ದಾರೆ (**ಪೃಥಿವೀ ಗತ ಯೌವನಾ !**). ವೇದ-ವೀರಕಾವ್ಯ-ಪೌರಾಣಿಕ ಯುಗಗಳಲ್ಲಿ ಈ ರೀತಿಯ ಪರಿಸರ ನಾಶ ಆಗಿರಲಿಲ್ಲ. ನಮ್ಮ ಪೂರ್ವಜರು, ಋಷಿಗಳು ಪ್ರಕೃತಿಗೆ ಅದರಲ್ಲಿರುವ ಪಂಚಮಹಾಭೂತಗಳಿಗೆ (ದ್ರವ್ಯ, ನೀರು, ತೇಜಸ್ಸು, ಗಾಳಿ ಮತ್ತು ಆಕಾಶ) ಹೆಚ್ಚಿನ ಮಹತ್ವ ನೀಡಿದ್ದರು. ಪ್ರಕೃತಿಯಲ್ಲಿರುವ ಸಮಸ್ತ ಚೇತನ-ಅಚೇತನ ವಸ್ತುಗಳು ಭಗವಂತನ ಸೃಷ್ಟಿ, ಅವುಗಳಲ್ಲಿ ಚೈತನ್ಯವಿದೆ ಎಂದು ಪರಿಭಾವಿಸಿ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕನ್ನು ಕಲ್ಪಿಸಿದ್ದರು. ಆದ್ದರಿಂದಲೇ ಭಾರತೀಯ ತತ್ತ್ವಶಾಸ್ತ್ರದಲ್ಲಿ 'ಏಕ ಜೀವವಾದ ಬಹುಜೀವವಾದ' ಪ್ರತಿಪಾದಿತವಾಯಿತು. ಸೂಕ್ತ ಸಂದರ್ಭಗಳಲ್ಲಿ ಆ ಚೇತನ-ಅಚೇತನ ವಸ್ತುಗಳಿಗೆ ಪೂಜೆ ಸಲ್ಲಿಸುವ ಪರಿಪಾಠವಿತ್ತು. ಉದಾಹರಣೆಗೆ ಅಥರ್ವವೇದದಲ್ಲಿ ದೊಡ್ಡ ಯಾಗಗಳನ್ನು ಮಾಡುವಾಗ, 400 ಕ್ಕೂ ಹೆಚ್ಚು ಜಾತಿಯ ಪ್ರಾಣಿಗಳನ್ನು ಯಾಗಶಾಲೆಗೆ ಕರೆತಂದು, ಅವುಗಳಿಗೆ ನಿರ್ದಿಷ್ಟ ಮಂತ್ರಗಳನ್ನು ಪಠಿಸಿ, ಆಹಾರ ನೀಡಿ ಬಿಡುಗಡೆ ಮಾಡುತ್ತಿದ್ದರ ಉಲ್ಲೇಖವಿದೆ. ವೀರಕಾವ್ಯ, ಪೌರಾಣಿಕ ಗ್ರಂಥಗಳಲ್ಲಿ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವೃಕ್ಷ ಸಂರಕ್ಷಣೆ, ಸಸ್ಯ ನಾಶಕ್ಕೆ, ಪ್ರಾಣಿವಧೆಗೆ ಸೂಕ್ತ ಶಿಕ್ಷೆ, ದಂಡ ನಿಗದಿ ಬಗ್ಗೆ ವಿಸ್ತಾರ ಮಾಹಿತಿ ಇದೆ. ವಿಷ್ಣು ಪುರಾಣವು ಐದು ಮಾವಿನ ಮರಗಳನ್ನು ನೆಟ್ಟು, ಬೆಳೆಸಿದವನು ನರಕಕ್ಕೆ ಹೋಗುವುದಿಲ್ಲ ಎಂದು ತಿಳಿಸುತ್ತದೆ (**ಪಂಚಾಮ್ರರೋಪೀ ನರಕಂ ನ ಯಾತಿ** ।). ನಮ್ಮ ಋಷಿಗಳು ಕುಲ-ವಂಶಕ್ಕೊಂದು ವೃಕ್ಷವನ್ನು ನಿಗದಿಪಡಿಸಿ, ಉಪನಯನ-ವಿವಾಹ ಮುಂತಾದ ಶುಭ ಸಂದರ್ಭಗಳಲ್ಲಿ ಕುಟುಂಬದವರು ವೃಕ್ಷಪೂಜೆ ಮಾಡಿ, ಅಂತಹ ಮರಗಳನ್ನು ನಾಶ ಮಾಡಬಾರದು ಎಂದು ತಿಳಿಸಿದ್ದು ವಿಪ್ರ ಸಮುದಾಯ ಇಂದಿಗೂ ಆ ಸಂಪ್ರದಾಯವನ್ನು ನಡೆಸಿಕೊಂಡು ಬಂದಿದೆ. ವಿಪ್ರರು ಶತಶತಮಾನಗಳಿಂದಲೂ, ಹಸು, ವೃಕ್ಷ, ನದೀ, ಸಮುದ್ರ, ಪರ್ವತ ಪೂಜೆಗಳನ್ನು ಮಾಡುತ್ತಿದ್ದಾರೆ. ಅವರೆಂದಿಗೂ ಪ್ರಕೃತಿಭಂಜಕರಾಗಿಲ್ಲ, ರಕ್ಷಕರಾಗಿದ್ದಾರೆ. ಈ ವಿಶ್ವ ಪರಿಸರದಿನ ಸಂದರ್ಭದಲ್ಲಿ, ನಾವೆಲ್ಲರೂ ಪ್ರಕೃತಿ ಮಾತೆಯ ರಕ್ಷಣೆಗೆ ಕೈಜೋಡಿಸೋಣ.

ಎಂದಿನಂತೆ ಮಾನ್ಯ ಅಧ್ಯಕ್ಷರ ಪ್ರವಾಸ ನಿರಂತರವಾಗಿ ನಡೆಯುತ್ತಿದ್ದು, ಕರ್ನಾಟಕದ ಎಲ್ಲೆಡೆ ಅಭೂತಪೂರ್ವ ಸ್ವಾಗತ ದೊರೆಯುತ್ತಿದೆ. ಬ್ರಾಹ್ಮಣ-ಸಂಘ ಸಂಸ್ಥೆಗಳು ಸನ್ಮಾನ್ಯ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಬಲಗೊಳುತ್ತಿವೆ. ಇದರ ಮೂಲಕ ಮುಂದಿನ ದಿನಗಳಲ್ಲಿ ವಿಪ್ರ ಯುವಶಕ್ತಿ, ವಿಪ್ರ ಮಹಿಳಾ ಶಕ್ತಿ, ವಿಪ್ರ ಶಕ್ತಿ ರಾಜ್ಯದ ಮುಖ್ಯ ಧ್ವನಿಯಾಗಲಿದೆ ಎಂಬುದೇ ನಮ್ಮ ಸದಾಶಯ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರೊ. ॥ಎಂ.ಕೆ. ಶ್ರೀಧರ್

### ಮಹಾಸಭಾದಿಂದ ಶೃಂಗೇರಿ ಜಗದ್ಗುರುಗಳಿಗೆ ಅಭೂತಪೂರ್ವ ಗುರುವಂದನಾ ಕಾರ್ಯಕ್ರಮ

# ಧರ್ಮಾಚರಣೆಯಲ್ಲಿನ ಶ್ರದ್ಧೆಯಿಂದಲೇ ಶ್ರೇಯಸ್ಸು ಪ್ರಾಪ್ತಿ

–ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು



**ಶ್ರೀ ಜಗದ್ಗುರುಗಳಿಗೆ ಮಹಾಸಭೆಯಿಂದ ಫಲ ಹಾಗೂ ಗುರುಕಾಣಿಕೆ ಸಮರ್ಪಣೆ**



**ಶ್ರೀಗಳಿಂದ ಅನುಗ್ರಹ ಮಂತ್ರಾಕ್ಷತೆ**

ದಿನಾಂಕ 29–05–2022ರಂದು ಮಹಾಸಭಾ ವತಿಯಿಂದ ಶ್ರೀ ಶೃಂಗೇರಿ ಶಾರದಾಪೀಠದ ಜಗದ್ಗುರುಗಳಿಗೆ ಗುರುವಂದನಾ ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತು.

ಪ್ರತಿಯೊಬ್ಬರೂ ಧರ್ಮದ ಆಚರಣೆಯನ್ನು ಶ್ರದ್ಧೆಯಿಂದ ಪಾಲಿಸುವುದರಿಂದ ಶ್ರೇಯಸ್ಸು ಲಭಿಸಲಿದೆ ಎಂದು ಶೃಂಗೇರಿ ಶಾರದಾಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಈ ಸಂದರ್ಭದಲ್ಲಿ ನುಡಿದರು.

ನಗರದ ಶಂಕರಮಠದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು ಧರ್ಮದ ಅನುಷ್ಠಾನದಿಂದ ಅಪಾರವಾದ ಫಲ ಸಿಗಲಿದೆ. ತಾತ್ಕಾಲಿಕ ಸಂತೋಷಕ್ಕಾಗಿ ಧರ್ಮಾಚರಣೆಯ ನಿಯಮಗಳನ್ನು ಬಿಡಬಾರದು. ಜೀವನದ ಸಾರ್ಥತೆಗೆ ಧರ್ಮದ ಅನುಷ್ಠಾನವೇ ಮುಖ್ಯ. ಇದರಿಂದ ಮಾನವನ ಜೀವನದಲ್ಲಿ ಪ್ರಯೋಜನ ಲಭಿಸಲಿದೆ ಎಂದು ಹೇಳಿದರು.

ಜಗತ್ತಿನಲ್ಲಿ ಬ್ರಾಹ್ಮಣನಾಗಿ ಜನ್ಮ ಪಡೆಯುವುದು ಅನೇಕ ಜನ್ಮಗಳಲ್ಲಿ ಪಡೆದ ಪುಣ್ಯದಿಂದ ಮಾತ್ರ ಸಾಧ್ಯ. ಅದನ್ನು ಸಾರ್ಥಕಪಡಿಸಿಕೊಳ್ಳುವುದಕ್ಕಾಗಿ ಧರ್ಮ ಅನುಷ್ಠಾನ ಮಾಡಬೇಕು. ಬರೀ ಬ್ರಾಹ್ಮಣನಾಗಿ ಹುಟ್ಟುವುದರಿಂದ ಬ್ರಾಹ್ಮಣ್ಯ ಲಭಿಸುವುದಿಲ್ಲ. ಪರಿಪೂರ್ಣ ಬ್ರಾಹ್ಮಣನಾಗಲು ಧರ್ಮದ ಆಚರಣೆಯೂ ಮುಖ್ಯ. ಈ ನಿಟ್ಟಿನಲ್ಲಿ ಬ್ರಾಹ್ಮಣ ಸಮಾಜ ಕಾರ್ಯೋನ್ಮುಖವಾಗಬೇಕೆಂದರು.

ಜನ್ಮದಿಂದ ಬ್ರಾಹ್ಮಣನಾದರೆ ಬ್ರಹ್ಮಬಂಧುವಾಗುತ್ತಾನೆ ವಿನಃ ಬ್ರಾಹ್ಮಣನಾಗುವುದಿಲ್ಲ. ಸಮಾಜದ ಪ್ರಮುಖರು ಐಕ್ಯಮತ್ಯ ಸಾಧಿಸಿ ಇತರ ಧರ್ಮಗಳಿಗೆ ಮಾದರಿಯಾಗಬೇಕು. ಹಾಗೆಯೇ ಧರ್ಮವನ್ನು ಮೊದಲು ಅರಿತು ಇತರರಿಗೆ ಮಾರ್ಗದರ್ಶನ ಮಾಡುವಂತಾಗ ಬೇಕು. ಆಗ ಇತರ ಸಮಾಜದವರು ಬ್ರಾಹ್ಮಣರನ್ನು ಕೀಳಾಗಿ ಕಾಣುವ ಪ್ರಮೇಯವೇ ಬರುವುದಿಲ್ಲ. ಅಲ್ಲದೇ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳುವುದನ್ನು ಕಲಿತುಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಬ್ರಾಹ್ಮಣರಿಗೆ ಸಂಸ್ಕಾರ ಮುಖ್ಯ. ಷೋಡಶ ಸಂಸ್ಕಾರಗಳು ಮನುಷ್ಯನಿಗೆ ಧಾರ್ಮಿಕ ಜೀವನ ನಡೆಸಲು ಸಾಧ್ಯವಾಗುತ್ತದೆ. ನಂತರ ಧರ್ಮ ಅನುಷ್ಠಾನ ಮಾಡಲು ಸಹಕಾರಿಯಾಗಲಿದೆ ಎಂದು ಹೇಳಿದರು. ಮನೆಯಲ್ಲಿನ ಮಕ್ಕಳಿಗೆ ನಮ್ಮ ಪರಂಪರೆ, ಧರ್ಮ, ಧರ್ಮದ ಸೂಕ್ಷ್ಮತೆಯನ್ನು ತಿಳಿಸಬೇಕು. ಇದರಿಂದಾಗಿ ಮುಂದಿನ ಪೀಳಿಗೆಗೂ ಧರ್ಮದ ಬಗ್ಗೆ ಜಾಗೃತಿ ಮೂಡಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಬ್ರಾಹ್ಮಣ ಸಮಾಜವು ಅಧ್ಯಾತ್ಮಿಕ ಹಾಗೂ ಲೌಕಿಕ ಎರಡರಲ್ಲೂ ಶ್ರೇಯೋಭಿವೃದ್ಧಿ ಹೊಂದಲು ಸಮಾಜವು ಐಕ್ಯಮತ ಮತ್ತು ಒಗ್ಗಟ್ಟನ್ನು ಪ್ರದರ್ಶಿಸಬೇಕಾಗಿದೆ. ಅಖಿಲ ಕರ್ನಾಟಕ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರಿಗೆ ಸಮಾಜವನ್ನು ಶ್ರೇಯೋಭಿವೃದ್ಧಿಗೆ ಕೊಂಡೊಯ್ಯುವ ಸಾಮರ್ಥ್ಯವನ್ನು ಶ್ರೀಮನ್ನಾರಾಯಣನು ಕರುಣಿಸಲಿ ಎಂದು ಜಗದ್ಗುರುಗಳು ಆಶೀರ್ವದಿಸಿದರು.

ಮಹಾಸಭೆ ಹಮ್ಮಿಕೊಂಡಿರುವ ಈ ಗುರುವಂದನಾ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯಲ್ಲಿ ರಾಜ್ಯದ ಎಲ್ಲಾ ಭಾಗಗಳಿಂದ ಶ್ರದ್ಧಾ ಭಕ್ತಿಯಿಂದ ವಿಪ್ರರು ಹಾಗೂ ಗಣ್ಯರು ಭಾಗವಹಿಸಿರುವುದು ತಮಗೆ ಅತೀವ ಸಂತೋಷವನ್ನು ತಂದಿದೆ. ಇವರೆಲ್ಲರಿಗೂ ಪೂರ್ಣ ಆಶೀರ್ವಾದವನ್ನು ಮಾಡುತ್ತಿದ್ದೇವೆಂದು ಮಹಾಸ್ವಾಮಿಗಳವರು ತಿಳಿಸಿದರು.



## ಶಂಕರ ಭಗವತ್ಪಾದರ ಕೊಡುಗೆ ಅಪಾರ

ಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದ ಮಹಾಸಭಾ ಅಧ್ಯಕ್ಷರು, ಸನಾತನ ಧರ್ಮ ಇವತ್ತಿಗೂ ಭಾರತ ದೇಶದಲ್ಲಿ ಜೀವಂತವಾಗಿ ಸದೃಢವಾಗಿ ಉಳಿದಿದೆ ಎಂದರೆ ಅದಕ್ಕೆ ಕಾರಣಕರ್ತರು ಶ್ರೀ ಶಂಕರ ಭಗವತ್ಪಾದರು, ಅನೇಕ ಮೂಢನಂಬಿಕೆ ಮತ್ತು ಅತಿಯಾದ ಕರ್ಮಶ್ರದ್ಧೆಯೇ ಸ್ವರ್ಗ ಪ್ರಾಪ್ತಿಗೆ ಕಾರಣ ಎಂದು ನಂಬಿದ ಸಮಯದಲ್ಲಿ ಮತ್ತು ನಾನಾ ಪಂಥಗಳಲ್ಲಿ ಹರಿದು ಹಂಚಿಹೋಗಿದ್ದ ಸನಾತನ ಧರ್ಮವನ್ನು ಒಂದುಗೂಡಿಸಿ ಅದನ್ನು ಒಂದು ಚೌಕಟ್ಟಿನಲ್ಲಿ ತಂದ ಶ್ರೇಯಸ್ಸು ಶ್ರೀ ಶಂಕರ ಭಗವತ್ಪಾದರದ್ದು ಎಂದು ಹೇಳಿದರು. ಶ್ರೀ ಶಂಕರರಿಂದ ಸ್ಥಾಪಿತವಾದ ಶೃಂಗೇರಿ ಮಠದ ಅವಿಚ್ಛಿನ್ನ ಪರಂಪರೆಯ ಮಹತ್ವವನ್ನು ವಿವರಿಸಿದರು. ಸಮಸ್ತ ಬ್ರಾಹ್ಮಣ ಸಮುದಾಯದ ಪರವಾಗಿ ಶ್ರೀಗಳಿಗೆ ವಂದನೆ ಸಲ್ಲಿಸುತ್ತಾ, ಬ್ರಾಹ್ಮಣ ಸಮುದಾಯದ ಶ್ರೇಯಸ್ಸಿಗಾಗಿ ಶ್ರೀಗಳಿಂದ ಮಾರ್ಗದರ್ಶನ ಹಾಗೂ ಆಶೀರ್ವಾದವನ್ನು ಬೇಡಿದರು.

ಇದೇ ಸಂದರ್ಭದಲ್ಲಿ ಶ್ರೀಗಳು ವಿಪ್ರನುಡಿಯ ಇಂಗ್ಲೀಷ್ ಆವೃತ್ತಿಯನ್ನು ಬಿಡುಗಡೆಗೊಳಿಸಿದರು. ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್, ಶಾಸಕ ರವಿಸುಬ್ರಹ್ಮಣ್ಯ, ಯು.ಬಿ. ವೆಂಕಟೇಶ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ




ಮಹೇಶ್ ಜೋಶಿ ಇವರುಗಳು ಜಗದ್ಗುರುಗಳಿಗೆ ತಮ್ಮ ನುಡಿನಮನಗಳನ್ನು ಅರ್ಪಿಸಿದರು. ಮಠದ ಆಡಳಿತಾಧಿಕಾರಿ ಡಾ॥ ವಿ.ಆರ್. ಗೌರೀಶಂಕರ್, ಮಹಾಸಭೆಯ ಪದಾಧಿಕಾರಿಗಳು, ಸದಸ್ಯರು ಹಾಗೂ ರಾಜ್ಯಾದ್ಯಂತ ಎಲ್ಲ ಭಾಗಗಳಿಂದ ಆಗಮಿಸಿದ ಅಪಾರ ಸಂಖ್ಯೆಯ ವಿಪ್ರಬಂಧುಗಳು ಭಾಗವಹಿಸಿದ್ದರು. ಮಹಾಸಭಾ ಸದಸ್ಯರು ನೀಡಿದ ಆರು ಲಕ್ಷ ಎಪ್ಪತ್ತು ಸಾವಿರ ರೂ.ಗಳ ಗುರುಕಾಣಿಕೆಯೊಂದಿಗೆ ಸಮಸ್ತ ಬ್ರಾಹ್ಮಣ ಸಮುದಾಯದ ಪರವಾಗಿ ಜಗದ್ಗುರುಗಳಿಗೆ ಫಲ ಸಮರ್ಪಣೆಯನ್ನು ಮಾಡಲಾಯಿತು.

## ಮಹಾಸಭಾಧ್ಯಕ್ಷರಿಂದ ನೇಮಕಗೊಂಡ ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು

| | | |
|---|---|---|
| ಶ್ರೀ ನರಸಿಂಗರಾವ್ ದೇಶಪಾಂಡೆ, ರಾಯಚೂರು | -- | ಹಿರಿಯ ಪರಿಷತ್ ಸದಸ್ಯರು |
| ಶ್ರೀ ಎನ್.ಎನ್. ವಿಶ್ವನಾಥ್, ಬೆಂಗಳೂರು | -- | ಕೈಗಾರಿಕಾ ಉದ್ಯಮಿಗಳ ವಲಯಕ್ಕೆ ಸಂಚಾಲಕರು. |
| ಶ್ರೀ ಟಿ.ಎಸ್. ಅಶ್ವತ್ಥನಾರಾಯಣರಾವ್, ಬೆಂಗಳೂರು | -- | ಬೆಂಗಳೂರು ದಕ್ಷಿಣ ವಿಭಾಗದ ಸಂಚಾಲಕರು |
| ಶ್ರೀ ವೈ.ಜಿ. ರಾಘವೇಂದ್ರ, ಬೆಂಗಳೂರು | -- | ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು |
| ಶ್ರೀ ಟಿ.ಎಲ್. ಅರುಣ್‌ಕುಮಾರ್, ಬೆಂಗಳೂರು | -- | ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು |

## ಸಾಂಸ್ಕೃತಿಕ ಚಟುವಟಿಕೆಗಳ ಸಮಿತಿ

| | | |
|---|---|---|
| ಶ್ರೀಮತಿ ವಿದ್ಯಾ ರವಿಶಂಕರ್ | .. | ಗೌರವ ಸದಸ್ಯರು |
| ಶ್ರೀ ಸುನೀಲ್ ಪುರಾಣಿಕ್ | .. | ಗೌರವ ಸಲಹೆಗಾರರು |
| ಶ್ರೀ ಕಿಕ್ಕೇರಿ ಕೃಷ್ಣಮೂರ್ತಿ | .. | ಗೌರವ ಸದಸ್ಯರು |
| ಶ್ರೀಮತಿ ನಾಗಲಕ್ಷ್ಮಿ ಕೆ.ರಾವ್ | .. | ಸಂಚಾಲಕರು |
| ಶ್ರೀ ಸತೀಶ್ ಎನ್.ಎಸ್ | .. | ಸಹ ಸಂಚಾಲಕರು |

**ಬೇಕಾಗಿದ್ದಾರೆ. : ಶ್ರೀ ಗಣಪತಿ ಸೇವಾ ಟ್ರಸ್ಟ್ (ರಿ.)** ಶಾರದಾ ಕಾಲೋನಿ, ಬಸವೇಶ್ವರನಗರ, ಬೆಂಗಳೂರು ಇಲ್ಲಿಗೆ ಸ್ಮಾರ್ತ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಉಚಿತ ವಸತಿ ಸೌಕರ್ಯದೊಂದಿಗೆ ಸೂಕ್ತ ಸಂಭಾವನೆ ನೀಡಲಾಗುವುದು.
**ಸಂಪರ್ಕಿಸಿ : ಶ್ರೀ ಪ್ರಭಾಕರ, ಗೌ॥ ಕಾರ್ಯದರ್ಶಿ : 9845124699 /8277299070**

# ಶಿರಸಿಯಲ್ಲಿ ವಿಪ್ರ ಸಮಾವೇಶ



ವಿಪ್ರಸಮಾವೇಶದ ಉದ್ಘಾಟನೆ

ನಗರದ ಟಿ.ಆರ್.ಸಿ. ಸಭಾ ಭವನದಲ್ಲಿ ತ್ರಿಮತಸ್ಥ ಬ್ರಾಹ್ಮಣರ ವಿಪ್ರ ಸಮಾವೇಶವು ಯಶಸ್ವಿಯಾಗಿ ಜರುಗಿತು. ಮಹಾಸಭಾದ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರು ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆ, ವಿಧಾನಸಭಾ ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಕಾರ್ಮಿಕ ಸಚಿವರಾದ ಶ್ರೀ ಶಿವರಾಮ ಹೆಬ್ಬಾರ್, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಹೆಗಡೆ, ಸ್ವರ್ಣವಲ್ಲಿ ಮಹಾಸಂಸ್ಥಾನದ ಅಧ್ಯಕ್ಷರಾದ ಶ್ರೀ ವಿ.ಎನ್. ಹೆಗಡೆ, ಟಿ.ಆರ್.ಸಿ. ಬ್ಯಾಂಕ್ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಹೆಗಡೆ, ಹವ್ಯಕ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಆರ್.ಎಸ್. ಹೆಗಡೆ ಹರಗಿ, ರಾಜ್ಯ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ ಹೆಗಡೆ ಹಾಗೂ ಬ್ರಾಹ್ಮಣ ಮಹಾಸಭಾದ ಪದಾಧಿಕಾರಿಗಳು ಭಾಗಿಯಾಗಿದ್ದರು.

ಸಮಾವೇಶದಲ್ಲಿ ಮಾತನಾಡಿದ ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಅಖಿಲ ಕರ್ನಾಟಕ ಬ್ರಾಹ್ಮಣರ ಮಹಾಸಭಾದ ಅಧ್ಯಕ್ಷರಾಗಿ ಅಶೋಕ ಹಾರನಹಳ್ಳಿ ಅಧಿಕಾರ ಸ್ವೀಕರಿಸಿದ ನಂತರ ಬಹು ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ ಹಾಗೂ ಕರ್ನಾಟಕದಾದ್ಯಂತ ನಡೆಸುತ್ತಿರುವ ಪ್ರವಾಸವನ್ನು ಕಂಡು ನಾವೆಲ್ಲರೂ ಚಕಿತರಾಗಿದ್ದೇವೆ ಎಂದು ಹೇಳಿದರು.

ಕಾರ್ಮಿಕ ಸಚಿವ ಶ್ರೀ ಶಿವರಾಂ ಹೆಬ್ಬಾರ್ ಅವರು ಮಾತನಾಡಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಬ್ರಾಹ್ಮಣರಿದ್ದಾರೆ. ಜಿಲ್ಲೆಯ ಪ್ರತಿಯೊಬ್ಬ ಬ್ರಾಹ್ಮಣರು ಹಾಗೂ ಸಂಘಟನೆಗಳು ಮಹಾಸಭಾದೊಂದಿಗೆ ಕೈ ಜೋಡಿಸಿ ಸಮುದಾಯಕ್ಕೆ ಬಲ ತುಂಬುವಂತಾಗಬೇಕು ಹಾಗೂ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪೂರಕವಾದ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶ್ರೀ ಆರ್.ವಿ. ದೇಶಪಾಂಡೆಯವರು ಮಾತನಾಡಿ ಸಮಾಜದಲ್ಲಿ ಬ್ರಾಹ್ಮಣರು, ನಿಷ್ಠಾವಂತರು ಹಾಗೂ ಯಾರ ತಂಟೆಗೂ ಹೋಗದೆ ದೇವೋಪಾಸನೆಯನ್ನು ಮಾಡುತ್ತಾ, ತನ್ನಷ್ಟಕ್ಕೆ ತಾನು ಎಂಬಂತೆ ಇರುವವರು. ಆದರೆ ಒಂದು ಸಾಂಘಿಕ ಶಕ್ತಿಯಾಗಿ ಹೊರಹೊಮ್ಮಲು ಇನ್ನೂ ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಹಾರನಹಳ್ಳಿ ಅವರ ನೇತೃತ್ವದಲ್ಲಿ ಸಾಂಘಿಕ ಶಕ್ತಿಯಾಗಿ ಹೊರಹೊಮ್ಮಬೇಕು ಹಾಗೂ ಹೆಚ್ಚು ಹೆಚ್ಚು ಮಹಿಳೆಯರು ಪಾಲ್ಗೊಳ್ಳಬೇಕು ಮತ್ತು ಸಮಾಜದ ಎಲ್ಲಾ ಪಂಗಡಗಳು ಮಹಾಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಹೇಳಿದರು.

ಇದೇ ಸಂದರ್ಭದಲ್ಲಿ ಪ್ರಸಿದ್ಧ ಪತ್ರಕರ್ತ ಶ್ರೀ ವಿಶ್ವೇಶ್ವರಭಟ್ ರವರು ಮಾತನಾಡಿ ಬ್ರಾಹ್ಮಣರು ಸರ್ಕಾರದ ಮೀಸಲಾತಿ ಇಲ್ಲದೆ ಜೀವನ ಸಾಗಿಸುತ್ತಿರುವವರು. ಹೀಗಿರುವಾಗ ಸರ್ಕಾರದ ಮುಂದೆ

## ಸಮಾವೇಶದಲ್ಲಿ ವಿಪ್ರಗಣ್ಯರಿಗೆ ಸನ್ಮಾನ



ವಿಧಾನಸಭಾ ಅಧ್ಯಕ್ಷ ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ



ಮಾಜಿ ಸಚಿವ ಶ್ರೀ ಆರ್.ವಿ. ದೇಶಪಾಂಡೆ



ಕಾರ್ಮಿಕ ಸಚಿವ ಸನ್ಮಾನ್ಯ ಶ್ರೀ ಶಿವರಾಮ ಹೆಬ್ಬಾರ್

## ಸಮಾವೇಶದಲ್ಲಿ ವಿಪ್ರಗಣ್ಯರಿಗೆ ಸನ್ಮಾನ



ಶ್ರೀ ಪ್ರಮೋದ್ ಹೆಗಡೆ
ಪಂಚಾಯತ ರಾಜ್ಯ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಉಪಾಧ್ಯಕ್ಷರು



ಶ್ರೀ ವಿಶ್ವೇಶ್ವರ ಭಟ್, ಸಂಪಾದಕರು, ವಿಶ್ವವಾಣಿ ದಿನಪತ್ರಿಕೆ

ಕೈಯೊಡ್ಡಿ ಮೀಸಲಾತಿ ಬೇಡುವ ಅವಶ್ಯಕತೆ ಬ್ರಾಹ್ಮಣರಿಗೇಕೆ ಎಂದು ಪ್ರಶ್ನಿಸಿದರು.

ಪತ್ರಕರ್ತರ ಈ ಪ್ರಶ್ನೆಗೆ ಮಹಾಸಭಾದ ಅಧ್ಯಕ್ಷರಾದ ಹಾರನಹಳ್ಳಿ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಮಜಾಯಿಷಿ ನೀಡಿದರು. ನಾವು ಬ್ರಾಹ್ಮಣರಿಗೆ ಪ್ರತ್ಯೇಕ ಮೀಸಲಾತಿ ನೀಡಿ ಎಂದು ಸರ್ಕಾರದ ಮುಂದೆ ಬೇಡುತ್ತಿಲ್ಲ. ಆದರೆ ಕೇಂದ್ರ ಸರ್ಕಾರ ಈಗಾಗಲೆ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಅವಕಾಶ ಕಲ್ಪಿಸಿದೆ. ಬ್ರಾಹ್ಮಣರಲ್ಲಿಯೂ ಆರ್ಥಿಕವಾಗಿ ಬಡವರಿದ್ದು ಈ ಸೌಲಭ್ಯ ಪಡೆದುಕೊಳ್ಳಲು ಅರ್ಹರಿದ್ದಾರೆ. ಅವರಿಗೆ ಈ ಸೌಲಭ್ಯವನ್ನು ನೀಡುವ ದಿಸೆಯಲ್ಲಿ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಲಿ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸಂವಿಧಾನದ ಅಡಿಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ಕಲ್ಪಿಸಿದ್ದು ಅದೇ ರಾಜ್ಯದಲ್ಲಿಯೂ ಸಮರ್ಪಕವಾಗಿ ಅನುಷ್ಠಾನಕ್ಕೆ ಬರಬೇಕು ಎಂದು ಹೇಳಿದರು.

ಸಮುದಾಯದ ಎಲ್ಲ ಮತಗಳು, ಪಂಗಡಗಳು ಹಾಗೂ ಸಂಘಗಳು ಒಗ್ಗಟ್ಟಾಗಿ ಸಮುದಾಯದ ಸಂಘಟನೆಗೆ ಶಕ್ತಿ ತುಂಬ ಬೇಕೆಂದು ತಿಳಿಸುತ್ತಾ ಈ ದಿಸೆಯಲ್ಲಿ ಸಮುದಾಯದ ಎಲ್ಲರ ಸಹಕಾರವನ್ನು ಕೋರಿದರು.

ಈ ಸಮಾರಂಭದಲ್ಲಿ ಕರ್ನಾಟಕದ ನಾನಾ ಪ್ರದೇಶಗಳಿಂದ ಆಗಮಿಸಿದ ಅಪಾರ ಸಂಖ್ಯೆಯ ವಿಪ್ರರು ಪಾಲ್ಗೊಂಡು ಸಮಾವೇಶವನ್ನು ಅತ್ಯಂತ ಯಶಸ್ವಿಗೊಳಿಸಿದರು.


ಜಾಹಿರಾತು

**"NICE HOME FOR RENT**

**Immediately available for occupation"**

We want to "RENT OUT" TO OUR COMMUNITY PEOPLE a 2 bed room flat at GUBBALALA MAIN ROAD (Near Uttarahalli), which is VERY well connected in all aspects,With every small little amenity being next door,right next door. This flat is unique with excellent FAMILY BASED PEOPLE (Majority of them only Brahmins !) as neighbourhood, and very homely environment.

**Interested parties or their references can contact me on priority**
**9036045819 or 9844079128,**
**Email : tosureshmv @gmail.com;tosureshynk@ gmail.com.Please be informed,**
**HOUSE CAN BE RENTED OUT "ONLY FOR OUR COMMUNITY PEOPLE"**

# ಶಿರಸಿಯಲ್ಲಿ ಮಹಾಸಭೆಯ ಕೇಂದ್ರ ಕಾರ್ಯಕಾರಿಣಿಯ ಎರಡನೇ ಸಭೆ



ದಿನಾಂಕ 21.05.2022 ರಂದು ಶಿರಸಿಯಲ್ಲಿ ರಾಜ್ಯ ಕಾರ್ಯಕಾರಿಣಿಯ ಎರಡನೇ ಸಭೆಯು ಮಹಾಸಭಾದ ಅಧ್ಯಕ್ಷರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯಿತು. 100ಕ್ಕೂ ಹೆಚ್ಚು ಸದಸ್ಯರು ಹಾಗೂ ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ಮಹಾಸಭೆಯ ನೂತನ ಅಧ್ಯಕ್ಷರು ಅಧಿಕಾರ ಸ್ವೀಕರಿಸಿದ ನಂತರದ ಸಮಗ್ರ ಕಾರ್ಯ ಚಟುವಟಿಕೆಗಳ ಸಿಂಹಾವಲೋಕನ ಹಾಗೂ ಪರಾಮರ್ಶೆಗಳಲ್ಲಿ ಎಲ್ಲ ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಸಕ್ರಿಯವಾಗಿ ಪಾಲ್ಗೊಂಡರು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಶ್ರೀಧರಮೂರ್ತಿಗಳು ಹಿಂದಿನ ಕಾರ್ಯಕಾರಿಣಿ ಸಭೆಯ ನಡಾವಳಿಗಳನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದರು. ಸಂಘಟನಾ ಕಾರ್ಯದರ್ಶಿಗಳಾದ ಡಾ॥ ಬಿ.ಎಸ್. ರಾಘವೇಂದ್ರ ಭಟ್‌ರವರು ಅಧ್ಯಕ್ಷರು ಇದುವರೆಗೆ ಮಹಾಸಭೆಯ ಸರ್ವತೋಮುಖ ಬೆಳವಣಿಗೆಗೆ ಕೈಗೊಂಡ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಅವರು ರಾಜ್ಯಾದ್ಯಂತ ನಡೆಸಿದ ಸಂಘಟನಾ ಪ್ರವಾಸದ ಯಶಸ್ಸಿನ ಕುರಿತು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಪಾಲ್ಗೊಂಡ ಉಪಾಧ್ಯಕ್ಷರು, ಸಂಘಟನಾ ಕಾರ್ಯದರ್ಶಿಗಳು ಹಾಗೂ ವಿವಿಧ ಸಮಿತಿಗಳ ಸಂಚಾಲಕರು ಆಯಾ ವಿಭಾಗಗಳ ಇದುವರೆಗಿನ ಕಾರ್ಯಚಟುವಟಿಕೆಗಳ ಬಗ್ಗೆ ಸಲ್ಲಿಸಿದ ವರದಿಗಳನ್ನು ಪರಾಮರ್ಶಿಸಲಾಯಿತು. ಸಭೆಯ ಕೊನೆಯಲ್ಲಿ ಮಾತನಾಡಿದ ಅಧ್ಯಕ್ಷರು, 4-5 ತಿಂಗಳ ಅವಧಿಯಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯವು ಮೇಲುನೋಟಕ್ಕೆ ದೊಡ್ಡದಾಗಿ ತೋರಿದರೂ ವಾಸ್ತವವಾಗಿ ಸಮುದಾಯದ ಪ್ರತಿಯೊಬ್ಬರಿಗೂ ತಲುಪುವಂತ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿ ಹಾಗೂ ಇನ್ನೂ ಹೆಚ್ಚಿನ ವೇಗದೊಂದಿಗೆ ನಡೆಯಬೇಕಾದ ಅಗತ್ಯವನ್ನು ಸದಸ್ಯರಿಗೆ ಮನವರಿಕೆ ಮಾಡಿದರು. ಈಗ ಸಿದ್ಧವಾದ ವೇದಿಕೆಯನ್ನು ಸಮರ್ಪಕವಾಗಿ ಬಳಸಿ, ಕಾರ್ಯಯೋಜನೆಗಳು ರಾಜ್ಯಾದಂತ ವಿಸ್ತಾರಗೊಳಿಸುವಂತೆ ಎಲ್ಲಾ ಸದಸ್ಯರು, ಪದಾಧಿಕಾರಿಗಳಿಗೆ ಕರೆ ನೀಡಿದರು.

ಮಹಾಸಭಾ ಜಿಲ್ಲಾ ಉಸ್ತುವಾರಿ ಹಾಗೂ ಉಪಾಧ್ಯಕ್ಷ ನಟರಾಜ್ ಭಾಗವತರು ಮಾಡಿದ ಸಲಹೆಯನ್ನು ಅಂಗೀಕರಿಸಿ ಮುಂದಿನ ದಿನಗಳಲ್ಲಿ ಮಹಾಸಭೆಯ ಎಲ್ಲ ಪದಾಧಿಕಾರಿಗಳ ಸಭೆಯನ್ನು ಪ್ರತ್ಯೇಕವಾಗಿ ಕರೆಯಲಾಗುವುದು ಎಂದು ಪ್ರಕಟಿಸಿದರು. ನಟರಾಜ ಭಾಗವತರ ಮುಂದಿನ ಕಾರ್ಯಕಾರಿಣಿ ಸಭೆಯನ್ನು ಶಿವಮೊಗ್ಗ ದಲ್ಲಿ ನಡೆಸಬೇಕೆಂಬ ಆಹ್ವಾನವನ್ನು ಮನ್ನಿಸಿ ಮುಂದಿನ ಸೆಪ್ಟಂಬರ್ ನಲ್ಲಿ ಕಾರ್ಯಕಾರಿಣಿ ಸಭೆಯು ಜಿಲ್ಲಾ ಬ್ರಾಹ್ಮಣ ಸಭಾದ ಆತಿಥ್ಯ ದಲ್ಲಿ ಶಿವಮೊಗ್ಗದಲ್ಲಿ ನಡೆಸಲಾಗುವುದು ಎಂದು ಅಧ್ಯಕ್ಷರು ಈ ಸಂದರ್ಭದಲ್ಲಿ ಘೋಷಿಸಿದರು.

ಹಿರಿಯರ ಪರಿಷತ್‌ನ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ ಯವರು ಪ್ರಾಸ್ತಾವಿಕ ಭಾಷಣವನ್ನು ಮಾಡಿ ಕಾರ್ಯಕ್ರಮವನ್ನು ಸಮರ್ಪಕವಾಗಿ ನಿರೂಪಿಸಿದರು.

**(ಕಾರ್ಯಕಾರಿಣಿ ಸಭೆಯ ವಿವರವಾದ ನಡಾವಳಿಗಳ ವರದಿಯನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು).**



**ಎಸ್. ಶ್ರೀಧರಮೂರ್ತಿ**
ಪ್ರಧಾನ ಕಾರ್ಯದರ್ಶಿ
**ಹಾಗೂ**
**ಡಾ॥ ಬಿ.ಎಸ್. ರಾಘವೇಂದ್ರ ಭಟ್**
ಸಂಘಟನಾ ಕಾರ್ಯದರ್ಶಿ



**ನಟರಾಜ ಭಾಗವತ್**
ಉಪಾಧ್ಯಕ್ಷರು
ಜಿಲ್ಲಾ ಉಸ್ತುವಾರಿ



ಧಾರವಾಡದಲ್ಲಿ ಗಾಯತ್ರೀ ಭವನದ ನಿರ್ಮಾಣಕ್ಕೆ ನಿವೇಶನವನ್ನು ಕೊಡುಗೆ ನೀಡಿವುದಾಗಿ ವಾಗ್ದಾನ ಮಾಡಿದ ಧಾರವಾಡದ ಮಾಜಿ ಮೇಯರ್ ಶ್ರೀ ಹನುಮಂತರಾವ್ ಡಂಬಲ್‌ರವರಿಗೆ ಮಹಾಸಭಾ ಅಧ್ಯಕ್ಷರಿಂದ ಸನ್ಮಾನ

## ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಪದಾಧಿಕಾರಿಗಳು, ಸಂಚಾಲಕರು ಹಾಗೂ ಸದಸ್ಯರು


ಶ್ರೀ ಹಿರಿಯಣ್ಣಸ್ವಾಮಿ


ಶ್ರೀ ವೆಂಕಟೇಶ್ ಎಸ್. ನಾಯಕ್


ಶ್ರೀ ಜಯಸಿಂಹ


ಶ್ರೀಮತಿ ರೂಪಾಶಾಸ್ತ್ರಿ


ಶ್ರೀ ಸಂದೀಪ್ ರವಿ


ಶ್ರೀ ಎನ್.ಎನ್. ವಿಶ್ವನಾಥ್


ಶ್ರೀಮತಿ ನಾಗಲಕ್ಷ್ಮೀ ಕೆ. ರಾವ್


ಶ್ರೀ ಕಾರ್ತಿಕ್ ಬಾಪಟ್


ಶ್ರೀ ನರಸಿಂಹಮೂರ್ತಿ


ಶ್ರೀ ವೆಂಕಟೇಶ್ ದ್ವಾರಕನಾಥ್


ಜಾಹಿರಾತು

## ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ



ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ-ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು-560 061.
ದೂ. ಸಂ. 080-26731335, 26731336

**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

### ಸಂಘದ ಆಡಳಿತ ಮಂಡಳಿ ಸದಸ್ಯರು

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

# ಮೇ-ತಿಂಗಳ ಮಹಾಸಭಾಧ್ಯಕ್ಷರ ಯಶಸ್ವೀ ರಾಜ್ಯ ಪ್ರವಾಸ




ದಿನಾಂಕ 07.05.2022ರ ಶನಿವಾರದಂದು ಬೆಳಿಗ್ಗೆ 6.30 ಘಂಟೆಗೆ ಬೆಂಗಳೂರಿನಿಂದ ಹಾವೇರಿಗೆ ಪ್ರಯಾಣ-ಹಾವೇರಿ ನಗರದಲ್ಲಿ ವಿವಿಧ ತಾಲ್ಲೂಕುಗಳಿಂದ ಆಗಮಿಸಿದ್ದ ವಿಪ್ರ ಮುಖಂಡರನ್ನುದ್ದೇಶಿಸಿ ಮಹಾಸಭಾದ ಬಗ್ಗೆ ಹಾಗೂ ಸಂಘಟನೆಯ ಅವಶ್ಯಕತೆಯ ವಿವರಣೆಯನ್ನು ಮಹಾಸಭಾಧ್ಯಕ್ಷರು ನೀಡಿದರು. ನಂತರ ಕೆಲವು ಯುವ ವಿಪ್ರ ಉದ್ದಿಮೆದಾರರನ್ನು ಭೇಟಿಯಾದರು.

ಹಾವೇರಿ ಸಭೆ ನಂತರ ನೇರವಾಗಿ ಗದಗ ಪಟ್ಟಣಕ್ಕೆ ಪ್ರವಾಸ ಮುಂದುವರಿಸಿದರು. ಗದಗ ಪಟ್ಟಣದಲ್ಲಿ ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದವರ ಕುಟುಂಬದ ನಿವಾಸಕ್ಕೆ ಭೇಟಿ ನೀಡಿದರು. ಹಾವೇರಿ ನಗರದ ವಿಪ್ರ ಮುಖಂಡರೊಂದಿಗೆ ಭೋಜನ ಕೂಟದಲ್ಲಿ ಭಾಗಿಯಾದರು. ಗದಗಿನಲ್ಲಿ ವಿಪ್ರ ಮುಖಂಡರು ಏರ್ಪಡಿಸಿದ್ದ ಬೃಹತ್ ದ್ವಿಚಕ್ರ ವಾಹನ ರ್‍ಯಾಲಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ನಂತರ ನೂತನವಾಗಿ ಉದ್ಘಾಟನೆಗೊಂಡಿದ್ದ ಶ್ರೀ ಶಂಕರ ಮಠದ ಸಭಾಭವನದಲ್ಲಿ ಜರುಗಿದ ಜಿಲ್ಲಾ ಸಮಾವೇಶದಲ್ಲಿ ಪಾಲ್ಗೊಂಡರು. ಜಿಲ್ಲೆಯ ಹಲವು ತಾಲ್ಲೂಕುಗಳಿಂದ ಆಗಮಿಸಿದ್ದ ವಿಪ್ರರು ಸಭೆಯಲ್ಲಿ ಸಂಭ್ರದಿಂದ ಪಾಲ್ಗೊಂಡಿದ್ದರು. ಸಮಾವೇಶದಲ್ಲಿ ಮಹಿಳಾ ಪ್ರತಿನಿಧಿಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಒಂದು ವಿಶೇಷ. ಗದಗಿನಲ್ಲಿ ಪುರಾತನ ವೀರನಾರಾಯಣ ದೇವಾಲಯ ಹಾಗೂ ಹಲವು ಇತಿಹಾಸ ಪ್ರಸಿದ್ಧ ಸ್ಥಳಗಳಿಗೆ ಅಧ್ಯಕ್ಷರು ಹಾಗೂ ತಂಡ ಭೇಟಿ ನೀಡಿತು.



ಹಾವೇರಿ ಸಮಾರಂಭ

ಸಭೆಯ ನಂತರ ಹುಬ್ಬಳ್ಳಿಗೆ ತೆರಳುವ ದಾರಿಯಲ್ಲಿ ಅಣ್ಣಿಗೇರೆ ಗ್ರಾಮವನ್ನು ನಿಗದಿತ ವೇಳೆಗಿಂತ ಸುಮಾರು 1-1/2 ತಾಸು ತಡವಾಗಿ ಅಧ್ಯಕ್ಷರು ಹಾಗೂ ತಂಡದವರು ತಲುಪಿದರೂ-ಮಹಿಳೆಯರು ಹಾಗೂ ಹಿರಿಯರು ಕಾದಿದ್ದರು. ಇದು ವಿಪ್ರರು ಮಹಾಸಭೆಗೆ ಇಟ್ಟಿರುವ ಗೌರವದ ದ್ಯೋತಕವಾಗಿತ್ತು. ಈ ಭೇಟಿಯ ನಂತರ ಹುಬ್ಬಳ್ಳಿ ತಲುಪಿದಾಗ ರಾತ್ರಿ 9 ಘಂಟೆಯಾಗಿತ್ತು. ಆದಾಗ್ಯೂ ವಿಪ್ರರು ಸಭೆಯಲ್ಲಿ ಕಾದಿದ್ದರು. ಸುಮಾರು ರಾತ್ರಿ 11 ಘಂಟೆ ತನಕ ಸಭೆ ಜರುಗಿತು. ಸಭೆಯಲ್ಲಿ ಅರ್ಥಪೂರ್ಣ ಚರ್ಚೆ ನಡೆಯಿತು ಮತ್ತು ಬಹಳ ಯಶಸ್ವಿಯಾಗಿ ಮುಕ್ತಾಯವಾಯಿತು.



ಹಾವೇರಿ ವಿಪ್ರ ಸಮೂಹ

ದಿನಾಂಕ 08.05.2022ರಂದು ಹುಬ್ಬಳ್ಳಿಯಿಂದ ಬೆಳಿಗ್ಗೆ 7.30 ಘಂಟೆಗೆ ಮಹಾಸಭಾಧ್ಯಕ್ಷರು ಧಾರವಾಡಕ್ಕೆ ಪಯಣ ಬೆಳೆಸಿದರು. ವಿಪ್ರ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಯಲ್ಲಿ ಭಾಗವಹಿಸಿದ್ದರು. ಸಭಾ ಕಾರ್ಯಕ್ರಮ 11 ಘಂಟೆವರೆಗೆ ಬಹಳ ಯಶಸ್ವಿಯಾಗಿ ಜರುಗಿತು. ಕೇಂದ್ರಕಾರಿಣಿಯ ಸದಸ್ಯರಾದ ಶ್ರೀ ಹನುಮಂತರಾವ್ ಡಂಬಲ್‌ರವರು ಮಹಾಸಭಾದ ಶಾಖಾ ಕಛೇರಿ ಹಾಗೂ "ಶ್ರೀ ಗಾಯತ್ರಿ ಭವನ" ವನ್ನು ಧಾರವಾಡದಲ್ಲಿ ನಿರ್ಮಾಣ ಮಾಡಲು ಸೂಕ್ತ ನಿವೇಶನವನ್ನು ದಾನವಾಗಿ ನೀಡಲು ಮಹಾಸಭಾಧ್ಯಕ್ಷರಿಗೆ ವಾಗ್ದಾನ ಮಾಡಿದರು.



ಅಧ್ಯಕ್ಷರೊಂದಿಗೆ ಹಾವೇರಿ ವಿಪ್ರ ಮುಖಂಡರು



ಧಾರವಾಡದಲ್ಲಿ ವಿಪ್ರ ಮುಖಂಡರೊಂದಿಗೆ ಅಧ್ಯಕ್ಷರು

ನಂತರ ಅಂದೇ ಮಹಾಸಭಾಧ್ಯಕ್ಷರು ಬೆಳಗಾವಿಗೆ ಪಯಣ ಬೆಳೆಸಿದರು. ಅಲ್ಲೂ ಬೆಳಿಗ್ಗೆ ಸುಮಾರು 12 ಘಂಟೆಯ ವೇಳೆಗೆ ಅದ್ಭುತವಾದ ಸ್ವಾಗತ – ದ್ವಿಚಕ್ರವಾಹನದಲ್ಲಿ ರ್‍ಯಾಲಿ, ಮಹಾಸಭಾಧ್ಯಕ್ಷರಿಗೆ ತೆರೆದ ವಾಹನದಲ್ಲಿ ಮೆರವಣಿಗೆ. ಆ ಉರಿಬಿಸಿಲಿನಲ್ಲೂ ಆರದ ಉತ್ಸಾಹ ಸಂಘಟನೆಗೆ ಸಂಚಯನ ಮೂಡಿತ್ತು. ನಂತರ ಸುಂದರವಾದ ಸಭಾಂಗಣದಲ್ಲಿ ಅದ್ಭುತ ಸಭಾ ಕಾರ್ಯಕ್ರಮ. ರಾಷ್ಟ್ರದ ಹಲವು ಪ್ರತಿಷ್ಠಿತ ಉದ್ದಿಮೆದಾರರು ಮಹಾಸಭಾಧ್ಯಕ್ಷರೊಂದಿಗೆ ವೇದಿಕೆ ಹಂಚಿಕೊಂಡಿದ್ದರು. ಅಂತಾರಾಷ್ಟ್ರೀಯ ಖ್ಯಾತಿವೆತ್ತ ಉದ್ದಿಮೆದಾರರನ್ನು ಮಹಾಸಭಾಧ್ಯಕ್ಷರು ಭೇಟಿ ಮಾಡಿದ್ದು ಅಂದಿನ ವಿಶೇಷವಾಗಿತ್ತು. ವಿಪ್ರ ಉದ್ದಿಮೆದಾರರ ಸಮಿತಿಯನ್ನು ರಚಿಸಿ ವೇದಿಕೆಯಿಂದಲೇ ಮಹಾಸಭಾಧ್ಯಕ್ಷರು ಪ್ರಕಟಿಸಿದರು. ಈ ಸಭೆಯ ಮೂಲಕ ಸಂಘಟನೆಗೆ–ಸ್ವಾವಲಂಬನೆಗೆ ಅರ್ಥಪೂರ್ಣ ಸಭೆಯಾಯಿತು. ನಂತರ 4 ಘಂಟೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಶಾಖಾ ಕಛೇರಿಯನ್ನು ಬೆಳಗಾವಿಯಲ್ಲಿ ವಿಪ್ರ ಮುಖಂಡರ ಸಮ್ಮುಖದಲ್ಲಿ ಶ್ರೀ ಅಶೋಕ ಹಾರನಹಳ್ಳಿಯವರು ಉದ್ಘಾಟಿಸಿದರು.






ಕಾರ್ಯಕ್ರಮದ ನಂತರ ಧಾರವಾಡಕ್ಕೆ ಪ್ರಯಾಣ.

ದಿನಾಂಕ 09.05.2022ರಂದು ಹುಬ್ಬಳ್ಳಿಯಲ್ಲಿ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಷಿಯವರನ್ನು ಭೇಟಿ ಮಾಡಿ ಸರ್ಕಾರದ ಮಟ್ಟದಲ್ಲಿ ಸವಲತ್ತುಗಳನ್ನು ಪಡೆಯಲು ವಿಪ್ರ ಸಮುದಾಯ ಎದುರಿಸುತ್ತಿರುವ ತೊಂದರೆಗಳನ್ನು ಮಹಾಸಭಾ ಅಧ್ಯಕ್ಷರು ವಿವರಿಸಿದರು. ಸನ್ಮಾನ್ಯ ಮಂತ್ರಿಗಳು ಸಾವಧಾನವಾಗಿ ಆಲಿಸಿ ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಸರಿಪಡಿಸುವುದಾಗಿ ಆಶ್ವಾಸನೆ ನೀಡಿದರು. ಈಗಾಗಲೇ ಹುಬ್ಬಳ್ಳಿ ವಿಪ್ರ ಸಂಘಟನೆಗೆ ನೀಡಿರುವ ನಾಗರಿಕ ಸೌಲಭ್ಯ ನಿವೇಶನದಲ್ಲಿ ಮಹಾಸಭೆ ಶಾಖಾ ಕಛೇರಿ ಹಾಗೂ ಶ್ರೀ ಗಾಯತ್ರಿ ಭವನ ನಿರ್ಮಿಸಲು ಮಹಾಸಭೆಗೆ ನೀಡಲು ಸಿದ್ಧವಿರುವುದಾಗಿ ವಿಪ್ರ ಸಂಘಟನೆ ಮಹಾಸಭಾಧ್ಯಕ್ಷರಿಗೆ ತಿಳಿಸಿರುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಾಯಿತು. ಶ್ರೀ ಪ್ರಹ್ಲಾದ ಜೋಷಿಯವರು ಈ ಬೃಹತ್ ಕಾರ್ಯಕ್ಕೆ ತಾವು ಪೂರ್ಣ ಬೆಂಬಲ ನೀಡುವುದಾಗಿ ವಾಗ್ದಾನ ಮಾಡಿದರು.

ಹುಬ್ಬಳ್ಳಿಯಿಂದ ನೇರವಾಗಿ ಚಿತ್ರದುರ್ಗಕ್ಕೆ ಆಗಮಿಸಿದ ಮಹಾಸಭಾಧ್ಯಕ್ಷರು ವಿಪ್ರ ಮುಖಂಡರ ಸಭೆಯಲ್ಲಿ ಈ ಭಾಗದಲ್ಲಿ ವಿಪ್ರ ಸಂಘಟನೆ ಸ್ವಲ್ಪ ಕುಂಠಿತವಾಗಿರುವುದನ್ನು ತಿಳಿಸಿದರು. ಚರ್ಚೆಯ ನಂತರ ಸಭೆಯಲ್ಲಿ ಸಮಿತಿ ರಚಿಸಲು ತೀರ್ಮಾನಿಸಿ ಕೂಡಲೇ ಸಂಘಟನೆ ಬಲಪಡಿಸಲು ಸಂಚಾಲಕರನ್ನು ನೇಮಿಸಲಾಯಿತು

ದಿನಾಂಕ 10.05.2022ರ ಮಂಗಳವಾರದಂದು ಚಾಮರಾಜನಗರದ ಹೆಬ್ಬಸೂರಿನಲ್ಲಿ ಜಿಲ್ಲಾಮಟ್ಟದ ಸದಸ್ಯತ್ವ ಅಭಿಯಾನದಲ್ಲಿ ಮಹಾಸಭಾಧ್ಯಕ್ಷರು ಭಾಗವಹಿಸಿದ್ದರು.

ಹೆಬ್ಬಸೂರಿನಲ್ಲಿ ನಡೆದ ಬೃಹತ್ ಸದಸ್ಯತ್ವ ಅಭಿಯಾನದಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಅಧ್ಯಕ್ಷರು/ಕಾರ್ಯದರ್ಶಿಗಳು ಆಗಮಿಸಿ ಸಂಗ್ರಹಿಸಿದ್ದ ಸದಸ್ಯರ ಅರ್ಜಿಯನ್ನು ಅಧ್ಯಕ್ಷರಿಗೆ ಸಲ್ಲಿಸಿದರು. ಇಲ್ಲಿಯ ಸಭೆಯಲ್ಲಿಯೂ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿದ್ದದ್ದು ವಿಶೇಷ.

ಒಟ್ಟಿನಲ್ಲಿ ಮೇ ತಿಂಗಳ ಮಹಾಸಭಾಧ್ಯಕ್ಷರ ಪ್ರವಾಸ ಅತ್ಯಂತ ಯಶಸ್ವೀ ಹಾಗೂ ಪರಿಣಾಮಕಾರಿಯಾಗಿತ್ತು – ಸಂಘಟನೆಗೆ ಹೆಚ್ಚು ಪುಷ್ಠಿ ನೀಡಿತು.

# ಮಹಾಸಭಾದ ಮೆಡಿಕಲ್ ಸೆಲ್ ಉದ್ಘಾಟನಾ ಸಮಾರಂಭ




## ಬಡ ಬ್ರಾಹ್ಮಣರಿಗೆ ವೈದ್ಯಕೀಯ ನೆರವು

ಆರ್ಥಿಕವಾಗಿ ಹಿಂದುಳಿದ ಎಲ್ಲ ಬಡ ಬ್ರಾಹ್ಮಣರಿಗೂ ವೈದ್ಯಕೀಯ ಸೌಲಭ್ಯದ ನೆರವು ಸಿಗಲು ಮಹಾಸಭಾ ವತಿಯಿಂದ ಆರೋಗ್ಯ ಮತ್ತು ವೈದ್ಯಕೀಯ ವಿಭಾಗವನ್ನು ಆರಂಭಿಸಲಾಗುತ್ತಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಬಿ.ಎನ್.ಎಂ. ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಆರೋಗ್ಯ ಮತ್ತ ವೈದ್ಯಕೀಯ ವಿಭಾಗ ಪ್ರಾರಂಭೋತ್ಸವ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಭಾವತಿಯಿಂದ ಈಗಾಗಲೇ ಮಹಿಳಾ ಘಟಕ, ಯುವ ಘಟಕ ಆರಂಭಿಸಲಾಗಿದೆ. ಅದರಂತೆಯೇ ಇಂದು ವೈದ್ಯಕೀಯ ವಿಭಾಗವನ್ನು ಆರಂಭಿಸಲಾಗುತ್ತಿದೆ. ಸಮುದಾಯದ ಅಶಕ್ತರಿಗೆ ನೆರವಾಗುವ ದೃಷ್ಟಿಯಿಂದ ಮೆಡಿಕಲ್ ಹೆಲ್ಪ್‌ಲೈನ್ ಆರಂಭಿಸುವ ಚಿಂತನೆ ನಡೆಸಲಾಗಿದ್ದು, ಶೀಘ್ರವೇ ಅದರ ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು. ತಮ್ಮ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನಗರದ 10 ಪ್ರತಿಷ್ಠಿತ ಆಸ್ಪತ್ರೆಗಳ ಜತೆ ಈ ಕುರಿತು ಒಪ್ಪಂದವೂ ಆಗಿದೆ ಎಂದು ಹೇಳಿದರು. ಪ್ರಾಸ್ತಾವಿಕ ಭಾಷಣ ಮಾಡಿದ ವೈದ್ಯಕೀಯ ವಿಭಾಗದ ರಾಜ್ಯ ಸಂಚಾಲಕರಾದ ಡಾ. ಸಿ.ಎ. ಕಿಶೋರ್‌ರವರು ವೈದ್ಯಕೀಯ ವಿಭಾಗದ ಧ್ಯೇಯೋದ್ದೇಶಗಳನ್ನು ದೀರ್ಘವಾಗಿ ವಿವರಿಸಿ, ವಿಪ್ರ ವೈದ್ಯ ಸಮುದಾಯದ ನೆರವನ್ನು ಕೋರಿದರು.

ಶಾಸಕರಾದ ರವಿಸುಬ್ರಹ್ಮಣ್ಯ, ಖ್ಯಾತ ಕಲಾವಿದ ಸುಚೇಂದ್ರಪ್ರಸಾದ್, ಸಮಾಜ ಸೇವಕಿ ಮೇದಿನಿ, ಉದಯ ಗುರಡಾಚಾರ್, ಹಿರಿಯ ಚಲನಚಿತ್ರ ನಟ ಸುಂದರ್‌ರಾಜ್, ಬಿ.ಎನ್.ವಿ ಸಂಸ್ಥೆಯ ಕಾರ್ಯದರ್ಶಿ ಶ್ರೀ ನಾರಾಯಣರಾವ್, ಆರ್ ಮಾನೆಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಆರೋಗ್ಯ ಘಟಕ ಉತ್ತಮವಾಗಿ ಸಮಾಜಕ್ಕೆ ಸೇವೆ ಸಲ್ಲಿಸಲಿ ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಸ್ವಸ್ಥ ಸಮೃದ್ಧ ಭಾರತ, ಭಾರತೀಯ ಆಯುರ್ವೇದ ಪ್ರತಿಷ್ಠಾನದ ಸಹಯೋಗದಲ್ಲಿ ರೋಗಿಗಳಿಗೆ ಮಧುಮೇಹ, ಕ್ಯಾನ್ಸರ್ ಉಚಿತವಾಗಿ ತಪಾಸಣೆ ನಡೆಸಲಾಯಿತು. ಪದ್ಮಶ್ರೀ ಪ್ರಶಸ್ತಿ ವಿಜೇತ ಡಾ.ಬಿ.ಎನ್. ಗಂಗಾಧರ ಅವರಿಗೆ ವಿಪ್ರ ವೈದ್ಯ ಸೇವಾರತ್ನ ಪ್ರಶಸ್ತಿ, ಡಾ.ಜಯಂತಿ ತುಳಸಿ, ಡಾ. ಶ್ರೀನಿವಾಸ್ ಕೆ. ಬನ್ನಿಗೋಳ್, ಡಾ. ಹೆಚ್.ಎನ್.ರವಿಕುಮಾರ್ ಅವರಿಗೆ ವಿಪ್ರ ವೈದ್ಯಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ದತ್ತು ಮಗು ಬೇಕಾಗಿದೆ**

ಆರೋಗ್ಯವಾಗಿರುವ, ಚುರುಕಾಗಿರುವ 3 ವರ್ಷದೊಳಗಿನ ಬ್ರಾಹ್ಮಣ ಮಗು ಕಾನೂನು ರೀತ್ಯಾ ದತ್ತು ಸ್ವೀಕರಿಸಲು ಬೇಕಾಗಿದೆ.
ಆಸಕ್ತರು ವಿವರಗಳಿಗಾಗಿ ಸಂಪರ್ಕಿಸಿ : 8072353587 / 7904422449 / 9840095522

# ಕೃಷ್ಣ ಯಜುರ್ವೇದದ ಕನ್ನಡ 13 ನೇ ಸಂಪುಟ ಬಿಡುಗಡೆ



ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ಕೃಷ್ಣ ಯಜುರ್ವೇದ ಕನ್ನಡ ಪ್ರಕಾಶನದ 13ನೇ ಸಂಪುಟವನ್ನು ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಶ್ರೀಗಳು ಇತ್ತೀಚೆಗೆ ಬಿಡುಗಡೆಗೊಳಿಸಿದರು.

ಮನುಷ್ಯನ ಜೀವನದಲ್ಲಿ ಧಾರ್ಮಿಕ ಅನುಷ್ಠಾನ ಅತ್ಯಂತ ಮುಖ್ಯ. ಧರ್ಮಾನುಷ್ಠಾನ ಮಾಡುವುದರಿಂದ ಜೀವನ ಸಾರ್ಥಕತೆ ಪಡೆಯುತ್ತದೆ. ಅನಾದಿ ಕಾಲದಿಂದಲೂ ಬೆಳೆದು ಬಂದ ವೇದಗಳು ಎಲ್ಲರ ಆಸ್ತಿ. ಎಲ್ಲಾ ಶಾಸ್ತ್ರಗಳು ವೇದವನ್ನು ಇಟ್ಟುಕೊಂಡೇ ಮಾಡಲಾಗಿದೆ. ವೇದಗಳ ಅಧ್ಯಯನದಿಂದ ಶ್ರೇಯಸ್ಸು ಸಿಗಲಿದೆ. ಹಾಗೆ ಆಧ್ಯಯನ ಮಾಡಬೇಕೆಂದರೆ ಅದಕ್ಕೆ ಸಮರ್ಥ ಮಾರ್ಗದರ್ಶಕರೂ ಬೇಕು. ಮಾರ್ಗದರ್ಶನ ಮಾಡುವವರೂ ವೇದಗಳನ್ನು ಸಂಪೂರ್ಣವಾಗಿ ಅರಿತಾಗ ಮಾತ್ರ ಇನ್ನೊಬ್ಬರಿಗೆ ಅವನ್ನು ಬೋಧಿಸಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ವೇದಾಧ್ಯಯನ ಮಾಡುವ ಹಾಗೆಯೇ ಅದನ್ನು ಸಂಪೂರ್ಣವಾಗಿ ಅರಿತು ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡುವ ಶಕ್ತಿ ಪಡೆಯಬೇಕು ಎಂದು ಅನುಗ್ರಹ ಭಾಷಣದಲ್ಲಿ ಹೇಳಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ವೇದಗಳನ್ನು ಕನ್ನಡದಲ್ಲಿ ಭಾಷಾಂತರಗೊಳಿಸಿ ಗ್ರಂಥ ರಚಿಸಿರುವುದು ಕಷ್ಟದ ಕೆಲಸ. ಈ ಸಾಧನೆಗೆ ಪರಮ ಪೂಜ್ಯ ಶೃಂಗೇರಿ ಜಗದ್ಗುರುಗಳ ಅನುಗ್ರಹವೂ ಆಗಿದೆ. ಕನ್ನಡ ಭಾಷಾಂತರದಿಂದ ಕನ್ನಡ ಭಾಷೆ ಮತ್ತಷ್ಟು ಶ್ರೀಮಂತಗೊಂಡಂತಾಗಿದೆ. ಜ್ಯೋತಿ ಸಮೂಹ ವಿದ್ಯಾ ಸಂಸ್ಥೆಗಳ ಸ್ಥಾಪಕರೂ ಸಾಂಸ್ಕೃತಿಕ ಚಿಂತಕರೂ ಆಗಿದ್ದ ಕೀರ್ತಿಶೇಷ ಬಿ.ಎನ್.ವಿ. ಸುಬ್ರಮಣ್ಯರವರ ಕೊಡುಗೆಯನ್ನು ಶ್ಲಾಘಿಸಿದ ಅವರು ಅವರ ಪ್ರಕಾಶನ ಸಂಸ್ಥೆಯ ಕಾರ್ಯ ಶ್ರೇಷ್ಠವಾಗಿದೆ ಎಂಧು ಶ್ಲಾಘಿಸಿದರು.

ಸಮಾರಂಭದ ಅತಿಥಿ ಸೋತಿ ನಾಗರಾಜ್ ಮಾತನಾಡಿ ವೇದ ಮನುಷ್ಯನನ್ನು ಸಾಕ್ಷಾತ್ಕಾರಕ್ಕೆ ತೆಗೆದುಕೊಂಡು ಹೋಗುವ ಮೊದಲ ಹೆಜ್ಜೆ. ವೇದಗಳ ಅರ್ಥ ಪ್ರತಿಯೊಬ್ಬರಿಗೂ ತಿಳಿಯಲು ಅನುಕೂಲವಾಗುವಂತೆ ಗ್ರಂಥದಲ್ಲಿ ಪ್ರಕಟಿಸಲಾಗಿದೆ ಎಂದರು.

ಶೃಂಗೇರಿ ಮಠದ ಆಡಳಿತಾಧಿಕಾರಿ ಪದ್ಮಶ್ರೀ ಪುರಸ್ಕೃತ ಡಾ|| ವಿ. ಗೌರಿಶಂಕರ್ ಮಾತನಾಡಿ ದಿ|. ಬಿ.ಎನ್.ವಿ ಸುಬ್ರಹ್ಮಣ್ಯರವರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಕೃಷ್ಣ ಯಜುರ್ವೇದ ಗ್ರಂಥವನ್ನು ಬಿಡುಗಡೆಗೊಳಿಸಿರುವುದು ಅವರ ಎಲ್ಲಾ ಕೆಲಸಗಳಿಗಿಂತ ಶ್ರೇಷ್ಠ ಕೆಲಸವಾಗಿದೆ. ಅವರು ಹಾಕಿಕೊಟ್ಟಿರುವ ಬುನಾದಿಯಲ್ಲೇ ಅವರ ಬಂಧು ನರಸಿಂಹನ್ ನೇತೃತ್ವದಲ್ಲಿ ಇವತ್ತಿಗೂ ಪಾಠಶಾಲೆ, ಪ್ರಕಾಶನ ಸಂಸ್ಥೆ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯವೆಂದರು.


## ಭಟ್ ಟ್ರಾವೆಲ್ & ಟೂರ್ಸ್

**ರಿಯಾಯಿತಿ ದರದಲ್ಲಿ ವಿದೇಶಿ ಪ್ರವಾಸ**

- 7 ದಿನಗಳ ಸಿಂಗಾಪುರ ಮಲೇಶಿಯಾ
- 5 ದಿನಗಳ ಬಾಲಿ
- 9 ದಿನಗಳ ವಿಯೆಟ್ನಾಂ
- 6 ದಿನಗಳ ಅಂಡಮಾನ್
- 4 ದಿನಗಳ ಮಾಲ್ಡೀವ್ಸ್
- 6 ದಿನಗಳ ದುಬೈ , ಅಬುಧಾಬಿ

**ಪಾಸ್ ಪೋರ್ಟ್ ಮಾಡಿಕೊಡಲಾಗುತ್ತದೆ**

ನಂ. 24 /3 ಮೊದಲನೇ ಮಹಡಿ, 3ನೇ ಕ್ರಾಸ್, 4ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-560018,
ಮೊಬೈಲ್: 98441 66555, 98440 37295,
ಫೋನ್: 080-2667 2555
E-mail: bhattravelandtours@gmail.com

## ಚಾಮರಾಜನಗರ ಹೆಬ್ಬಸೂರಿನಲ್ಲಿ ಅಭಿನಂದನಾ ಸಮಾರಂಭ-ವಿಪ್ರ ಸದಸ್ಯರಿಗೆ ಕಡಿಮೆ ದರದಲ್ಲಿ ಆರೋಗ್ಯ ವಿಮೆ



ಚಾಮರಾಜನಗರ ಜಿಲ್ಲಾ ಬ್ರಾಹ್ಮಣ ಸಂಘ ಇತ್ತೀಚಿಗೆ ಹೆಬ್ಬಸೂರಿನ ಶೃಂಗೇರಿ ಶಂಕರಮಠದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡುತ್ತಾ, ಶ್ರೀ ಅಶೋಕ ಹಾರನಹಳ್ಳಿಯವರು ಸದಸ್ಯರಿಗೆ ಕಡಿಮೆ ದರದಲ್ಲಿ ಆರೋಗ್ಯ ವಿಮೆ ದೊರಕಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ವೈದ್ಯರಿಂದ ಉಚಿತ ಚಿಕಿತ್ಸೆ, ವಕೀಲರಿಂದ ಉಚಿತ ಕಾನೂನು ಸಲಹೆ ಒದಗಿಸಲಾಗುತ್ತಿದೆ. ಕೃಷಿ ವಿಭಾಗದಿಂದಲೂ ಸಲಹೆ-ಸೂಚನೆ ದಕ್ಕುತ್ತಿದೆ ಎಂದು ಹೇಳಿದರು.

ರಾಜ್ಯವ್ಯಾಪಿ ಮಹಿಳಾ ಸಂಘಟನೆಗೆ ಬೆಂಬಲ ನೀಡಲಾಗಿದೆ. ಮಕ್ಕಳಲ್ಲಿ ಸಂಸ್ಕಾರ ಬೆಳೆಸಲು ಮತ್ತು ಸನಾತನ ಧರ್ಮ ಸಂರಕ್ಷಣೆಗೆ ಒತ್ತು ನೀಡಲಾಗುತ್ತಿದೆ. ವಿದ್ಯಾನಿಧಿ ಸ್ಥಾಪಿಸಿ ಈ ಮೂಲಕ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದೆ. ಬಹಳ ಮುಖ್ಯವಾಗಿ ಗ್ರಾಮೀಣ ಭಾಗದಲ್ಲಿ ಬ್ರಾಹ್ಮಣ ಸಮುದಾಯ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಇಂತಹ ಕಡೆ ನೆರವು ಒದಗಿಸಿ ಅವರನ್ನು ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ. ಯುವಜನತೆಯ ಸಂಘಟನೆಗೆ ಒತ್ತು ನೀಡಲಾಗಿದೆ.

ಇವೆಲ್ಲದರ ಜೊತೆಗೆ ಸಮುದಾಯಕ್ಕೆ ಹಲವು ಸೌಲಭ್ಯಗಳನ್ನು ಕಲ್ಪಿಸಿಕೊಡುವ ಹಿನ್ನೆಲೆಯಲ್ಲಿ ಸಂಘಟನೆಯು ಸರ್ಕಾರದ ಮಟ್ಟದಲ್ಲಿ ಸಚಿವರು, ಶಾಸಕರೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದೂ ಸಹ ಅಧ್ಯಕ್ಷರು ವಿವರಿಸಿದರು.

ಒಟ್ಟಾರೆಯಾಗಿ ಹಲವು ಹತ್ತು ಪರಿಣಾಮಕಾರಿಯಾದ ಯೋಜನೆಗಳು ಚಾಲನೆಗೊಳ್ಳುತ್ತಿವೆ. ಸಮುದಾಯದವರು ಇದರ ಪ್ರಯೋಜನ ಪಡೆಯಬೇಕಿದ್ದರೆ ಬ್ರಾಹ್ಮಣ ಮಹಾಸಭೆಯ ಸದಸ್ಯತ್ವವನ್ನು ಪಡೆಯಬೇಕಾಗಿದ್ದು ಸಂಘಟಿತರಾಗಬೇಕಿದೆ. ಚಾಮರಾಜನಗರದಲ್ಲಿ ಜಾರಿಯಾಗುತ್ತಿರುವ ಸದಸ್ಯತ್ವ ಅಭಿಯಾನವು ಸಂಘಟನೆಯ ಸದಸ್ಯರ ಸಂಖ್ಯೆ ವೃದ್ಧಿಗೆ ಪೂರಕವಾಗಿದೆ ಎಂದು ಅಭಿಪ್ರಾಯಪಟ್ಟರು.

## ಕೇಂದ್ರ ಸಚಿವರಾದ ಸನ್ಮಾನ್ಯ ಶ್ರೀ ಪ್ರಹ್ಲಾದ್ ಜೋಶಿಯವರೊಡನೆ ಮಹಾಸಭಾ ಅಧ್ಯಕ್ಷರ ನಿಯೋಗ ಭೇಟಿ



ದಿನಾಂಕ 09/05/2022 ರಂದು ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಮಹಾಸಭಾದ ಪದಾಧಿಕಾರಿಗಳೊಂದಿಗೆ ಹಾಗೂ ಹುಬ್ಬಳ್ಳಿಯ ಸ್ಥಳೀಯ ವಿಪ್ರ ಮುಖಂಡರೊಡಗೂಡಿ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ ಅವರನ್ನು ಭೇಟಿ ಮಾಡಿ ವಿಪ್ರಬಂಧುಗಳ ಕುಂದು ಕೊರತೆಗಳ ಬಗ್ಗೆ ಸಮಾಲೋಚಿಸಿದರು, ಪ್ರಮುಖವಾಗಿ ಸಮಾಲೋಚಿಸಿದ ಅಂಶಗಳು ಈ ಕೆಳಕಂಡಂತಿವೆ 1.EWS certificate ಪರಿಧಿಯ ವ್ಯಾಪ್ತಿ ವಿಸ್ತಾರ ಹೆಚ್ಚಿಸುವುದು (ಅಂದರೆ ಪ್ರಸ್ತುತ EWS Certificate annual ಕೇವಲ ಒಂದು ವರ್ಷಕ್ಕೆ ನೀಡಲಾಗುತ್ತಿದೆ. ಅದನ್ನು ಒಂದು ವರ್ಷದಿಂದ ಕನಿಷ್ಠ 3 ರಿಂದ 5 ವರ್ಷದ ಅವಧಿಗೆ ನೀಡುವುದು) ಶಿಕ್ಷಣ ಕ್ಷೇತ್ರದಲ್ಲಿ ಸೂಕ್ತ ಮೀಸಲಾತಿ (10%) 2. ಸರ್ಕಾರದ ಪತ್ರಿಕಾ ಜಾಹೀರಾತು ನೀತಿಯಲ್ಲಿ ವಿಪ್ರಬಾಂಧವರು ನಡೆಸುತ್ತಿರುವ ಪತ್ರಿಕೆಗಳಿಗೂ ಸೂಕ್ತ ಜಾಹೀರಾತು ಅವಕಾಶವನ್ನು ಕಲ್ಪಿಸಿ ಕೊಡುವುದು 3. ಹುಬ್ಬಳಿಯಲ್ಲಿ ವಿಪ್ರ ಸಮುದಾಯಕ್ಕೆ ಈಗಾಗಲೇ ಅನುದಾನವಾಗಿರುವ ಜಾಗದಲ್ಲಿ ವಿಪ್ರ ಸಮುದಾಯದ ಅನುಕೂಲಕ್ಕೆ ಗಾಯತ್ರಿ ಭವನದ ನಿರ್ಮಾಣ ಹಾಗೂ ಅದರ ರೂಪುರೇಷೆಗಳ ಬಗ್ಗೆ ಸಚಿವರೊಡನೆ ಮಾತುಕತೆ, ಹೀಗೆ ಇನ್ನೂ ಹಲವಾರು ವಿಷಯಗಳ ಬಗ್ಗೆ ಚರ್ಚಿಸಲಾಯಿತು, ಈ ಎಲ್ಲ ವಿಷಯಗಳ ಬಗ್ಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ಎಲ್ಲ ರೀತಿಯ ಸಹಕಾರವನ್ನು ಕೊಡುವುದಾಗಿ ಭರವಸೆಯನ್ನು ಕೊಟ್ಟಿರುತ್ತಾರೆ.

## ಹುಬ್ಬಳ್ಳಿಯಲ್ಲಿ ಸದಸ್ಯತ್ವ ಅಭಿಯಾನ



ದಿನಾಂಕ 30.04.2022ರಂದು ಹಳೆ ಹುಬ್ಬಳ್ಳಿಯ ಶ್ರೀ ಕೃಷ್ಣೇಂದ್ರ ಗುರು ಉತ್ಸವ ಸಂಸ್ಥೆ ಅಧ್ಯಕ್ಷರಾದ ಮೊರೇಶ್ ಕುಲಕರ್ಣಿ ಮತ್ತು ಕಾರ್ಯದರ್ಶಿ ವಿನಾಯಕ ತಾಪಸ ನೇತೃತ್ವದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನಕ್ಕೆ ಶ್ರೀ ಪ್ರಮೋದ್ ಮನೋಳಿಯವರಿಂದ ಚಾಲನೆ ನೀಡಲಾಯಿತು.




**ದಿನಾಂಕ 07.05.2022ರಂದು ಲಕ್ಷ್ಮೇಶ್ವರದಲ್ಲಿ ವಿಪ್ರ ಮುಖಂಡರ ಸಭೆಯಲ್ಲಿ ಮಹಾಸಭಾಧ್ಯಕ್ಷರು**

## ಸದಸ್ಯತ್ವ ಅಭಿಯಾನ



ಚಿತ್ಪಾವನ ಬ್ರಾಹ್ಮಣ ಸಮಾಜ ಬೆಂಗಳೂರು ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ಮಹಾಸಭಾ ಸಂಘಟನಾ ಕಾರ್ಯದರ್ಶಿ ಡಾ| ಬಿ.ಎಸ್. ರಾಘವೇಂದ್ರ ಭಟ್ ಹಾಗೂ ಸಹ ಕಾರ್ಯದರ್ಶಿ ಕಾರ್ತಿಕ್ ಬಾಪಟ್ ಅವರು ಭಾಗವಹಿಸಿ, ಚಿತ್ಪಾವನ ಪ್ರಮುಖ ಮುಖಂಡರೊಡಗೂಡಿ ಮಹಾಸಭಾ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು

## ಶ್ರೀ ಲಕ್ಷ್ಮೀ ಲಕ್ಷಾರ್ಚನೆ ಪೂಜಾ ಕಾರ್ಯಕ್ರಮ



ಬೆಂಗಳೂರು ಹೊಂಬೇಗೌಡನಗರದ ಬ್ರಾಹ್ಮಣ ಸಭಾದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ದಿನಾಂಕ 15.04.22ರಂದು ಬ್ರಾಹ್ಮಣ ಸುವಾಸಿನಿಯರಿಗಾಗಿ "ಶ್ರೀ ಲಕ್ಷ್ಮೀ ಲಕ್ಷಾರ್ಚನೆಯ ಪೂಜಾ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಪೂಜಾ ಕಾರ್ಯಕ್ರಮಕ್ಕೆ ಕ್ಷೇತ್ರದ ಶಾಸಕರಾದ ಡಾ. ಉದಯ ಗರುಡಾಚಾರ್ ಹಾಗೂ ಶ್ರೀಮತಿ ಮೇದಿನಿ ಗರುಡಾಚಾರ್ ಉಪಸ್ಥಿತರಿದ್ದರು.

## ಸೊರಬ ತಾಲ್ಲೂಕು ಬ್ರಾಹ್ಮಣ ಸಭೆಗೆ ನೂತನ ಅಧ್ಯಕ್ಷರು



ಶಿವಮೊಗ್ಗ ಜಿಲ್ಲೆ, ಸೊರಬದ ನಿವಾಸಿಯಾಗಿರುವ ಶ್ರೀ ದಿವಾಕರ್ ಭಾವೆಯವರು ಮೂಲತಃ ಕೃಷಿಕರು.

ದಿವಾಕರ್ ಭಾವೆಯವರು ಕಳೆದ 24 ವರ್ಷಗಳಿಂದ ಸೊರಬದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಶಾಲೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದು, ಈ ಶಾಲೆಯಲ್ಲಿ ಪ್ರತಿ ವರ್ಷ ಸುಮಾರು 700 ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಶ್ರೀಯುತರು ಕೃಷಿ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ತೊಡಗಿಸಿಕೊಂಡಿರುತ್ತಾರೆ.

ಹಾಗೂ ಕಳೆದ ವಾರ ಸೊರಬ ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷರಾಗಿ ಜವಾಬ್ದಾರಿ ಸ್ವೀಕರಿಸಿರುತ್ತಾರೆ.

## ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ಮಹಿಳಾ ಘಟಕ ರಚನೆಗಾಗಿ ಸಮಾಲೋಚನ ಸಭೆ





ರಾಜ್ಯ ಮಹಿಳಾ ವಿಭಾಗದ ಸಂಚಾಲಕಿ ಶ್ರೀಮತಿ ರೂಪಾ ಶಾಸ್ತ್ರಿಗಳ ನೇತೃತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ವಿಭಾಗವನ್ನು ರಚಿಸಲು ಪೂರ್ವಭಾವಿ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ, ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಮಹೇಶ ಕಜೆಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಸಭೆ ನಡೆಯಿತು. ಪೂರ್ವಭಾವಿ ಸಭೆಯನ್ನುದ್ದೇಶಿಸಿ ರಾಜ್ಯ ಸಂಚಾಲಕಿ ಶ್ರೀಮತಿ ರೂಪಾಶಾಸ್ತ್ರಿಯವರು ಮಾತನಾಡುತ್ತಾ ಮಹಿಳಾ ವಿಭಾಗದ ಸಂಘಟನೆ, ಮುಂದಿನ ಕಾರ್ಯಯೋಜನೆಗಳ ಬಗ್ಗೆ ಹಾಗೂ ಈಗಾಗಲೇ ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ಸಭೆಗೆ ಮನವರಿಕೆ ಮಾಡಿಕೊಟ್ಟರು. ಹವ್ಯಕ ಮಹಾಸಭಾದ ಮುಖಂಡ ರಾದ ಡಾ. ರಾಜೇಂದ್ರ ಪ್ರಸಾದ್, ಮಹಾಸಭಾದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು, ವಿವಿಧ ಬ್ರಾಹ್ಮಣ ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು.

ಉಡುಪಿಯಲ್ಲಿ ದಿನಾಂಕ 07.05.2022ರಂದು ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಳದ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಯಿತು. ಉಡುಪಿಯ ಖ್ಯಾತ ವೈದ್ಯರಾದ ಡಾ. ಕೆ.ಎಸ್. ಕಾರಂತರು ಹಾಗೂ ಜಿಲ್ಲಾ ಉಸ್ತುವಾರಿಗಳಾದ ಶ್ರೀ ನಟರಾಜ ಭಾಗವತರು ಮತ್ತು ಶ್ರೀ ಹೇರ್ಳೆಯವರು ಸಂಘಟನೆ ಅಗತ್ಯ ಕುರಿತು ಮಾರ್ಗದರ್ಶನ ನೀಡಿದರು. ಸಭೆಯನ್ನು ನಡೆಸಲು ಸ್ಥಳ ಮತ್ತು ಉಪಹಾರದ ವ್ಯವಸ್ಥೆ ಮಾಡಿದ ಶ್ರೀ ಗುರುನರಸಿಂಹ ದೇವಳದ ಆಡಳಿತ ಮಂಡಳಿಗೆ ಸಭೆಯು ಕೃತಜ್ಞತೆಯನ್ನು ಅರ್ಪಿಸಿತು.

## ಬಬ್ಬೂರುಕಮ್ಮೆ ಸಂಘದಿಂದ ಶಂಕರ ಜಯಂತಿ



**ಶಿವಮೊಗ್ಗ ಜಿಲ್ಲಾ ಬಬ್ಬೂರುಕಮ್ಮೆ ಸಂಘದಿಂದ  ಶಂಕರ ಜಯಂತಿ ಆಚರಣೆ ಅಧ್ಯಕ್ಷರಾದ ಕಾರಕೂಡ್ಲು ಗುರುಮೂರ್ತಿ ಖಜಾಂಚಿ ಕೃಷ್ಣಮೂರ್ತಿ ಕಾರ್ಯದರ್ಶಿ  ಎಸ್. ನಾಗೇಶ್ ಮತ್ತು ಸಂಘದ ನಿರ್ದೇಶಕರಾದ ಲಕ್ಷ್ಮಿ ಶ್ರೀಧರ್ ಜ್ಯೋತಿ ರವಿಕುಮಾರ್ ಆಶಾಲತಾ ಮೈಲಾರಯ್ಯ ರಾಂಪ್ರಸಾದ್ ಮಂಗಳ ರಾಮಮೂರ್ತಿ  ಇನ್ನಿತರರು ಹಾಜರಿದ್ದರು**

## ಅಭಿನಂದನೆಗಳು



ಪ್ರಸಿದ್ಧ ಕಲಾವಿಮರ್ಶಕ ಡಾ। ಎಂ. ಸೂರ್ಯಪ್ರಸಾದ್‌ರವರಿಗೆ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಶ್ರೀ ಬಾಲಸ್ವಾಮೀಜಿಗಳಿಂದ ಆಶ್ರಮದ ಪ್ರತಿಷ್ಠಿತ ಆಸ್ಥಾನ ವಿದ್ವಾನ್ ಗೌರವವನ್ನು ನೀಡಿ ಗೌರವಿಸಿದ ಸಂದರ್ಭದಲ್ಲಿ ಅವರಿಗೆ ಹಾರ್ದಿಕ ಅಭಿನಂದನೆಗಳು.

## ಸದಸ್ಯತ್ವ ಅಭಿಯಾನ



**ಜೆ.ಪಿ. ನಗರ 7ನೇ ಹಾಗೂ 8ನೇ ಹಂತದ ವಿಪ್ರ ಮಹಿಳಾ ವಿಭಾಗದ ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನ.**



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಮಹಿಳಾ ವಿಭಾಗದ ವತಿಯಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಬೃಹತ್ ಸದಸ್ಯತ್ವ ಆಂದೋಲನಕ್ಕೆ ಚಾಲನೆಯನ್ನು ನೀಡಲಾಯಿತು.



ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರನ್ನು ಹಳೆ ಹುಬ್ಬಳ್ಳಿಯ ಶ್ರೀ ಕೃಷ್ಣೇಂದ್ರ ಗುರುಗಳ ಸ್ವಾಮಿ ಮಠದಲ್ಲಿ ಸಮಿತಿಯ ವತಿಯಿಂದ ಸತ್ಕರಿಸಲಾಯಿತು.

## ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಭೇಟಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಮಹಿಳಾ ವಿಭಾಗದ ವತಿಯಿಂದ ರಾಜ್ಯಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಲ್ಲಿ ವಿಪ್ರ ಸಮುದಾಯದಲ್ಲಿರುವ ಸ್ವಾವಲಂಬಿ ಮಹಿಳೆಯರಿಗೆ ಉದ್ಯೋಗ ಸೃಷ್ಟಿಸಲು ಮತ್ತು ಅವರು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು, ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಪ್ರಾರಂಭಿಸಲು ಧನಸಹಾಯ ಒದಗಿಸುವ ಕುರಿತು, ಸಣ್ಣ ಸಣ್ಣ ವಿಪ್ರ ಸ್ವಸಹಾಯ ಗುಂಪುಗಳನ್ನು ರಚಿಸುವ ಕುರಿತು ಕರ್ನಾಟಕ ರಾಜ್ಯಾದ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಪ್ರಧಾನರಾದ ಧರ್ಮಸ್ಥಳ ಸುರೇಂದ್ರ ಕುಮಾರ್‌ರನ್ನು ಸಂಪರ್ಕಿಸಿ ಚರ್ಚಿಸಿದರು.

ಸಕಾರಾತ್ಮಕವಾಗಿ ಸ್ಪಂದಿಸಿದ ಶ್ರೀಯುತರು ಕೆಲವೇ ದಿನಗಳಲ್ಲಿ ಈ ಕುರಿತು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಪ್ರಮುಖರೊಂದಿಗೆ ಸಭೆಯನ್ನು ಏರ್ಪಡಿಸಿ, ವಿಪ್ರ ಮಹಿಳೆಯರಿಗೆ ಮತ್ತು ವಿಪ್ರ ಮಹಿಳಾ ಸಂಘಟನೆಗಳಿಗೆ ಸೂಕ್ತ ರೀತಿಯಲ್ಲಿ ಸಹಕರಿಸುವುದಾಗಿ ಭರವಸೆಯನ್ನು ನೀಡಿದರು

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆಯು ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

# ಶ್ರೀ ಶತಚಂಡಿಕಾ ಯಾಗ



ದಿನಾಂಕ 17.04.2022ನೇ ಭಾನುವಾರ ಬೆಂಗಳೂರು ಉತ್ತರ ವಲಯ ಯಲಹಂಕ ಉಪನಗರ ಅಟ್ಟೂರು, ಮುನೇಶ್ವರ ಬಡಾವಣೆಯಲ್ಲಿ ಶ್ರೀ ಶತಚಂಡಿಕಾ ಮಹಾಯಾಗವು ಶ್ರೀ ಶ್ರೀ ಡಾ॥ ಮಧುಸೂದನಾನಂದಪುರಿ ಸ್ವಾಮಿಗಳ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವೈಭವೋಪೇತವಾಗಿ ನಡೆಯಿತು.

ಈ ಮಹಾ ಪುಣ್ಯಕಾರ್ಯದಲ್ಲಿ ಅರಸೀಕೆರೆಯ ಶ್ರೀ ಮಾರುತಿ ಸಚ್ಚಿದಾನಂದ ಆಶ್ರಮದ ಶ್ರೀ ಶ್ರೀ ಪರಂಪರಾವಧೂತ ಸತೀಶ ಶರ್ಮಾ ಗುರೂಜಿ ಮತ್ತು ಅನೇಕ ವಿಪ್ರಸಮುದಾಯದವರು ಕುಟುಂಬ ಸಹಿತವಾಗಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಮಹಾಸಭೆಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ಕೌಶಿಕ್ ಹಾಗೂ ಉತ್ತರ ವಲಯದ ಸಹ ಸಂಚಾಲಕರಾದ ಶ್ರೀ ಕೆ.ಎಸ್.ಶ್ರೀಕಂಠಪ್ರಸಾದ್ ಅವರು ಉಪಸ್ಥಿತರಿದ್ದು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ದೊರೆಯಿತು.



ದಿನಾಂಕ 17.04.2022ರಂದು ರಾಮದುರ್ಗ ನಗರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಶ್ರೀಮತಿ ಪ್ರಿಯಾ ಪುರಾಣಿಕ ಅವರು ಮಹಿಳೆಯರೊಂದಿಗೆ ಸಮಾಲೋಚನೆಯನ್ನು ನಡೆಸಿದರು. ಈ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜದ ಮುಖಂಡರು, ಸಮಾಜದ ಮಹಿಳೆಯರು ಉಪಸ್ಥಿತರಿದ್ದರು.



ಭಾರತೀಯ ಜನತಾಪಕ್ಷದ ಹಿರಿಯ ನಾಯಕರಾದ ಶ್ರೀ ಭಾನುಪ್ರಕಾಶ್ ರವರಿಂದ ಮತ್ತೂರಿನಲ್ಲಿ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರಿಗೆ ಅಭಿನಂದನೆ.



ಹುಬ್ಬಳ್ಳಿ ಭವಾನಿ ನಗರ ಶ್ರೀ ರಾಘವೇಂದ್ರಸ್ವಾಮಿಗಳ ಮಠಕ್ಕೆ ನೂತನವಾಗಿ ವ್ಯವಸ್ಥಾಪಕರಾಗಿರುವ ಶ್ರೀ ವೇಣು ಮತ್ತು ಮಂತ್ರಾಲಯಕ್ಕೆ ವರ್ಗವಾಗಿರುವ ಶ್ರೀಧರ ಅವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಸನ್ಮಾನ.



ಬೆಂಗಳೂರಿನ ಜೆ.ಪಿ.ನಗರ 7ನೇ ಹಾಗೂ 8ನೇ ಹಂತದ ವಿಪ್ರ ಮಹಿಳಾ ವಿಭಾಗದ ಸಭೆಯು ಇತ್ತೀಚೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮಹಿಳಾ ವಿಭಾಗದ ರಾಜ್ಯ ಸಂಚಾಲಕರಾದ ಶ್ರೀಮತಿ ರೂಪಾಶಾಸ್ತ್ರಿಯವರು ಹಾಗೂ ಬೆಂಗಳೂರು ದಕ್ಷಿಣ ಕ್ಷೇತ್ರ ಮಹಿಳಾ ವಿಭಾಗದ ಸಂಚಾಲಕಿಯಾದ ಡಾ। ಶುಭಮಂಗಳ ಸುನೀಲ್‌ರವರ ನೇತೃತ್ವದಲ್ಲಿ ನಡೆಯಿತು. ಸಭೆಯಲ್ಲಿ ಜೆ.ಪಿ.ನಗರ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಟಿ.ಎಸ್.ಅಶ್ವತ್‌ನಾರಾಯಣ, ಮಹಾಸಭಾದ ಕಾರ್ಯಕಾರಿಣಿ ಸದಸ್ಯರಾದ ಪುಟ್ಟಣ್ಣ, ಅನಂತರಾಮ್, ಉಮೇಶ್ ಶಾಸ್ತ್ರಿ, ಸದಸ್ಯತ್ವ ಪರಿಷ್ಕೃತ ಸಮಿತಿ ಸದಸ್ಯರಾದ ಶ್ರೀ ಸಂಗೀತ ಸತೀಶ್ ಮತ್ತು ಮಹಿಳಾ ವಿಭಾಗದ ಪದಾಧಿಕಾರಿಗಳು ಹಾಜರಿದ್ದರು.

# ಅಂತಾರಾಷ್ಟ್ರೀಯ ಯೋಗ ವಿಜ್ಞಾನಿ ಡಾ.ಎಚ್.ಆರ್.ನಾಗೇಂದ್ರ (ಡಾ.ಎಚ್.ಆರ್.ಎನ್.)

ಸಂದರ್ಶಕರು: ಪ್ರೊ: ಎಂ.ಕೆ. ಶ್ರೀಧರ್

**ವಿಪ್ರನುಡಿ : ಸನ್ಮಾನ್ಯ ಡಾ। ಎಚ್.ಆರ್. ನಾಗೇಂದ್ರಜೀ, ತಮ್ಮ ಜೀವಮಾನದಲ್ಲಿ ಅತ್ಯಂತ ಪ್ರಭಾವ ಬೀರಿದ ವ್ಯಕ್ತಿಗಳು ಯಾರು ?**

**ಡಾ। ಎಚ್.ಆರ್.ಎನ್:** ಪುಟ್ಟಾ ಎಂದು ಕರೆಯಲ್ಪಡುತ್ತಿದ್ದ ನಮ್ಮ ತಂದೆಯ ತಾಯಿಯಾದ ಶ್ರೀಮತಿ ಪಾರ್ವತಮ್ಮ ಹಾಗೂ ನಮ್ಮ ಕುಟುಂಬದಲ್ಲಿ ಎಲ್ಲರೂ ಪ್ರೀತಿಯಿಂದ ಲಕ್ಷ್ಮೀ ಆಂಟಿ ಎಂದು ಕರೆಯುತ್ತಿದ್ದ ನನ್ನ ಸೋದರತ್ತೆಯಾದ ಲಕ್ಷ್ಮೀ ಇವರ ಜೀವನ ಪ್ರೀತಿ, ನಂಬಿಕೆ, ಸದಾಶಯ, ಶಿಸ್ತು, ಸಂಯಮ ನಮ್ಮ ವ್ಯಕ್ತಿತ್ವವನ್ನು ರೂಪಿಸಿತು.

**ವಿಪ್ರನುಡಿ: ಜಾಗತಿಕ ಮಟ್ಟದ ಯಂತ್ರರಚನಾ ವಿಜ್ಞಾನಿಗಳಾದ ತಾವು ಹೇಗೆ ಯೋಗ ವಿಜ್ಞಾನಿಯಾದಿರಿ? ಅದಕ್ಕೆ ಕಾರಣಗಳೇನು?**

**ಡಾ। ಎಚ್.ಆರ್.ಎನ್:** ನನ್ನ ಚಿಕ್ಕಪ್ಪ ಹೊ.ವೆ.ಶೇಷಾದ್ರಿಯವರು ಆರ್.ಎಸ್.ಎಸ್.ನ ಸ್ವಯಂಸೇವಕರು. ಅವರಿಂದ ರಾಷ್ಟ್ರೀಯತೆ, ಯೋಗ ಮಹತ್ವ ಶ್ರೀ ರಾಮಕೃಷ್ಣ ಪರಮಹಂಸ, ಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರ ವಿಚಾರಧಾರೆಗಳನ್ನು ಸಣ್ಣ ವಯಸ್ಸಿನಿಂದಲೂ ಕೇಳಿ ಸ್ಫೂರ್ತಿ ಹೊಂದಿದೆ. ವಿವೇಕಾನಂದರು ಹೇಳಿದ ಮಾನವನ ಸಂಪೂರ್ಣ ವ್ಯಕ್ತಿವಿಕಾಸ, ಸಾಮಾನ್ಯ ವ್ಯಕ್ತಿಯು ನಿರಂತರ ಶ್ರಮದಿಂದ ದೈವತ್ವಕ್ಕೆ ಏರುವ ಅವಕಾಶ, ಸಮಾಜ ಹಾಗೂ ರಾಷ್ಟ್ರ ಕಲ್ಯಾಣಕ್ಕೆ ವ್ಯಕ್ತಿಗಳು ನೀಡಬಹುದಾದ ಕಾಣಿಕೆ ಮುಂತಾದ ವಿಚಾರಗಳು ನನ್ನನ್ನು ಆಕರ್ಷಿಸಿದವು. ಸಂಶೋಧನಾ ರಂಗದಲ್ಲಿ ಮುಂದುವರಿದಂತೆ ನಿಜಸತ್ವಾನ್ವೇಷಣೆಯ ಕಡೆಗೆ ಹೋಗುವ ಆಸೆ ಹೆಚ್ಚಾಯಿತು. ಅಮೆರಿಕಾದಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿನ ಕೆಲವು ಆಧ್ಯಾತ್ಮಿಕ ವ್ಯಕ್ತಿಗಳ ಪರಿಚಯ ವಾಯಿತು. 1893 ಸ್ವಾಮಿ ವಿವೇಕಾನಂದರ ಭಾಷಣ, ಅವರು ಅಮೆರಿಕಾದಲ್ಲಿ ಕೈಗೊಂಡ ಆಧ್ಯಾತ್ಮಿಕ, ಸಾಮಾಜಿಕ ಚಟುವಟಿಕೆಗಳು ನನ್ನನ್ನು ಪ್ರೇರೇಪಿಸಿದವು. ವಿವೇಕಾನಂದರ ವಿಚಾರಗಳ ಹಿನ್ನೆಲೆಯಲ್ಲಿ ನಮ್ಮ ಯೋಗ-ಅಧ್ಯಾತ್ಮಗಳ ಪ್ರಚಾರ ಸಾಧನೆಯೇ ಜೀವನದ ಲಕ್ಷ್ಯವಾಯಿತು. ನಾಸಾ ವಿಶ್ವವಿದ್ಯಾಲಯವನ್ನು ತ್ಯಜಿಸಿ ಭಾರತಕ್ಕೆ ಬಂದು, ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದ ಪೂರ್ಣಾವಧಿ ಕಾರ್ಯಕರ್ತನಾಗಿ ಕೆಲಸ ಮಾಡಿ, ನಂತರ ನಿರ್ದೇಶಕನಾಗಿ ಕಾರ್ಯ ನಿರ್ವಹಿಸಿದೆ. ಆ ಕೇಂದ್ರದ ನಿರ್ದೇಶಕ ರಾಗಿದ್ದ ಸನ್ಮಾನ್ಯ ಏಕನಾಥ ರಾನಡೆಜೀ ಅವರು ನನ್ನಂತಹ ಯುವಕರಿಗೆ ಬಹಳ ಸ್ಫೂರ್ತಿ, ಉತ್ತೇಜನ ನೀಡಿದರು. ಇವು ವಿವೇಕಾನಂದರ ವಿಚಾರಧಾರೆಗಳನ್ನು ವೈಜ್ಞಾನಿಕವಾಗಿ ಜನರಿಗೆ ತಿಳಿಸುವ ಸಂಶೋಧನಾ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂಬ ಆಸೆಗೆ ಆಸರೆಯಾಯಿತು.

**ವಿಪ್ರನುಡಿ: ಯೋಗದ ಬಗ್ಗೆ ತಮಗೆ ಆಸಕ್ತಿ ಮೂಡಿದ್ದು ಹೇಗೆ?**

**ಡಾ। ಎಚ್.ಆರ್.ಎನ್:** ಸೋದರತ್ತೆ ಲಕ್ಷ್ಮೀ ಆಂಟಿ ಅವರ ಋಜು, ಸಾತ್ತ್ವಿಕ ಜೀವನ, ಭಾರತೀಯ ದರ್ಶನಗಳು, ಅದ್ವೈತ ವೇದಾಂತ, ಯೋಗವಾಸಿಷ್ಠ ಗ್ರಂಥದ ಬಗ್ಗೆ ಪ್ರೊ. ಎ.ಎಸ್. ಸತ್ಯನಾರಾಯಣ ಶಾಸ್ತ್ರಿಗಳ ವಿದ್ವತ್ಪೂರ್ಣ ಉಪನ್ಯಾಸ, ವಿವೇಕಾನಂದ ಕೇಂದ್ರದ ಯೋಗ ತರಬೇತಿ, ಸ್ವಾಮಿ ವಿವೇಕಾನಂದರ ನಾಲ್ಕು ಯೋಗಗಳು (ಕರ್ಮ, ಜ್ಞಾನ, ಭಕ್ತಿ, ರಾಜಯೋಗ) ನನ್ನನ್ನು ಸೆಳೆದವು. ಹೀಗಾಗಿ ನಮ್ಮ ಪ್ರಾಚೀನ ತತ್ತ್ವಶಾಸ್ತ್ರ ಗ್ರಂಥಗಳನ್ನು ಸಾಂಪ್ರದಾಯಿಕವಾಗಿ ಅಧ್ಯಯನ ಮಾಡಿದೆ. ಮೂಲತಃ ವಿಜ್ಞಾನಿಯಾಗಿದ್ದ ನನ್ನ ಮನಸ್ಸಿನಲ್ಲಿ,

### ಪದ್ಮಶ್ರೀ ಡಾ। ಎಚ್.ಆರ್. ನಾಗೇಂದ್ರ



ಇವರು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಪಿ.ಯು.ಸಿ. ಶಿಕ್ಷಣ, ಬಿ.ಎಂ.ಎಸ್. ಕಾಲೇಜಿನಲ್ಲಿ ಮೆಕಾನಿಕಲ್ ವಿಭಾಗದಲ್ಲಿ ಬಿ.ಇ. ಎಂ.ಇ. ಪದವಿ, ಐಎಎಸ್ಸಿ ಯಿಂದ ಪಿಎಚ್‌ಡಿ ಪಡೆದರು (1968). ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪೋಸ್ಟ್ ಡಾಕ್ಟರಲ್ ಸಂಶೋಧನೆ ಮಾಡಿ (1969) ಅಮೆರಿಕಾದ 'ನಾಸಾ' ಬಾಹ್ಯಾಕಾಶ ಸಂಸ್ಥೆಯಲ್ಲಿ, ವಿಜ್ಞಾನಿಯಾಗಿ ಅಮೆರಿಕಾದ ಹಾರ್ವರ್ಡ್ ವಿಶ್ವವಿದ್ಯಾಲಯ, ಲಂಡನ್‌ನ ಇಂಪೀರಿಯಲ್ ಕಾಲೇಜ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು (1970-72). ಹಲವರಿಂದ ಗುರೂಜಿ ಎಂದು ಪ್ರಖ್ಯಾತರಾದ ಡಾ। ಎಚ್.ಆರ್.ಎನ್ ಅವರು ರಾಜ್ಯ-ರಾಷ್ಟ್ರ, ಅಂತಾರಾಷ್ಟ್ರೀಯ ಯೋಗ ಸಮ್ಮೇಳನಗಳನ್ನು ಆಯೋಜಿಸಿದ್ದು, 400ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು, 35 ಪುಸ್ತಕಗಳನ್ನು ಪ್ರಕಟಿಸಿ, 40 ಸಂಶೋಧನ ವಿದ್ಯಾರ್ಥಿಗಳ ಪಿಎಚ್‌ಡಿ ಪದವಿಗೆ ಮಾರ್ಗದರ್ಶಕರಾಗಿದ್ದಾರೆ.

ಡಾ। ಎಚ್.ಆರ್.ಎನ್ ಅವರಿಗೆ ಹಲವಾರು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಸನ್ಮಾನಗಳು ಲಭಿಸಿದ್ದು, ಅವುಗಳಲ್ಲಿ ಮುಖ್ಯವಾದದ್ದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸರ್ಕಾರ ಪದ್ಮಶ್ರೀ (2016), ಅಮೆರಿಕಾದ ಪತಂಜಲಿ ಅಂತಾರಾಷ್ಟ್ರೀಯ ಯೋಗ ಪ್ರಶಸ್ತಿ, ಕಳಿಂಗ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್. ಈಗ ಎಸ್.ವ್ಯಾಸ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಾಧಿಪತಿಗಳಾಗಿದ್ದಾರೆ.

ಭಾರತದ ಉದಾತ್ತ ವಿಚಾರಗಳನ್ನು ಆಧುನಿಕ ವಿಜ್ಞಾನದೊಂದಿಗೆ ಸಮೀಕರಿಸಬಹುದೆಂಬ ಚಿಂತನೆ ಉಂಟಾಯಿತು. ಆಧುನಿಕ ವೇಗೋತ್ಕರ್ಷಯುಗದಲ್ಲಿ ನಮ್ಮ ಯುವ ಪೀಳಿಗೆ, ಐಟಿ, ಬಿಟಿ, ಸಿಟಿ ಜನರು ಮಾನಸಿಕ, ಭಾವನಾತ್ಮಕ, ದೈಹಿಕ ಒತ್ತಡ ಹೊಂದಿ, ಹಲವು ಬಗೆಯ ವ್ಯಾಧಿಗಳಿಂದ ನರಳುತ್ತಿರುವುದನ್ನು ಕಂಡು, ಅವುಗಳ ನಿವಾರಣೆಗೆ ಯೋಗವೇ ರಾಮಬಾಣ ಎಂದು ಭಾವಿಸಿ, ಆನೇಕಲ್ ತಾಲ್ಲೂಕಿನ ಜಿಗಣಿ ಗ್ರಾಮದಲ್ಲಿ, 1986ರಲ್ಲಿ ವ್ಯಾಸ ಸಂಸ್ಥೆ ಡಾ. ನಾಗರತ್ನರವರ ಜೊತೆ ಸೇರಿ ರೂಪಗೊಳ್ಳಲು ಆರಂಭವಾಯಿತು. ಇಂದು ಆ ಸಂಸ್ಥೆ ಬಹಳ ದೊಡ್ಡಮಟ್ಟದ ಸ್ವಾಯುತ್ತ ವಿಶ್ವವಿದ್ಯಾಲಯವಾಗಿ ಬೆಳೆದಿದೆ. ಇಲ್ಲಿ ಯೋಗಕ್ಕೆ ಸಂಬಂಧಿಸಿದ ಹಲವಾರು ಕೋರ್ಸ್, ಸಂಶೋಧನೆಗಳನ್ನು ನಡೆಸಲಾಗುತ್ತಿದೆ.

**ವಿಪ್ರನುಡಿ: ಯೋಗವೆಂದರೇನು? ಅದರ ಆಯಾಮಗಳು ಯಾವುವು?**

**ಡಾ। ಎಚ್.ಆರ್.ಎನ್:** ಯೋಗವೆಂಬ ಪದವು ಸಂಸ್ಕೃತದ 'ಯುಜ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದ್ದು 'ಜೋಡಿಸುವಿಕೆ', 'ಸಂಯೋಗ', 'ಕೂಡುವುದು' ಎಂಬ ಅರ್ಥ ನೀಡುತ್ತದೆ. ಯೋಗವೆಂದರೆ ನಮ್ಮ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರವನ್ನು ನಿಯಂತ್ರಿಸಿ, ಸ್ಥಿರಗೊಳಿಸಿ, ಹತೋಟಿಯಲ್ಲಿ ಇಟ್ಟುಕೊಳ್ಳುವ ಸಾಧನ. ಯೋಗವು ಮನುಷ್ಯ–ಪ್ರಕೃತಿ ಏಕಾತ್ಮತೆ, ಆತ್ಮ–ಪರಮಾತ್ಮ ತಾದಾತ್ಮ್ಯತೆಗಳನ್ನು. ಪತಂಜಲಿ ಮಹರ್ಷಿಗಳು 2200 ವರ್ಷಗಳ ಹಿಂದೆ ತಮ್ಮ 195 ಯೋಗ ಸೂತ್ರಗಳ ಮೂಲಕ ಮೇಲ್ಕಂಡ ತತ್ತ್ವವನ್ನು ಪ್ರತಿಪಾದಿಸಿದರು. ಅವರ ಅಷ್ಟಾಂಗಯೋಗ ಅಭ್ಯಾಸದ ಮೂಲಕ ಜನರು ದೈಹಿಕ, ಮಾನಸಿಕ, ಭಾವನಾತ್ಮಕ, ಬೌದ್ಧಿಕ ಆಧ್ಯಾತ್ಮಿಕ ಸುಪ್ತ ಶಕ್ತಿಯನ್ನು ಜಾಗೃತಗೊಳಿಸಿ, ಸಂಪೂರ್ಣ ವ್ಯಕ್ತಿತ್ವ ವಿಕಾಸವನ್ನು ಹೊಂದಬಹುದು.

**ವಿಪ್ರನುಡಿ: ಪ್ರತಿವರ್ಷ ಜೂನ್ 21ರಂದು ಆಚರಿಸುವ "ಅಂತಾರಾಷ್ಟ್ರೀಯ ಯೋಗದಿನ" (ಐಡಿವೈ) ದ ಮಹತ್ವವೇನು?**

**ಡಾ। ಎಚ್.ಆರ್.ಎನ್:** ಖಗೋಲಶಾಸ್ತ್ರದ ಪ್ರಕಾರ ಜೂನ್ 21 ಸೂರ್ಯನು ಭೂ ಮಧ್ಯ ರೇಖೆಯಿಂದ ಸಮಾನಾಂತರ ವೃತ್ತಗಳಿಗೆ ತಲುಪುವ ಸಮಯ. ಅಂದು ಉತ್ತರಾಯಣದ ಕೊನೆದಿನವಾಗಿದ್ದು, ಹಗಲಿನ ಅವಧಿ ಜಾಸ್ತಿ ಇರುತ್ತದೆ. ಆ ದಿನ ವರ್ಷದ ಅರ್ಧ ಭಾಗ. ಆದ್ದರಿಂದಲೇ ನಮ್ಮ ದೇಶದ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು 27.09.2014ರಂದು ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದಲ್ಲಿ ಭಾಷಣ ಮಾಡುತ್ತಾ, "ಜಗತ್ತಿನ ಹಲವಾರು ಸಮಸ್ಯೆಗಳಿಗೆ ಯೋಗಾಭ್ಯಾಸವೇ ಪರಿಹಾರ. ಎಲ್ಲ ದೇಶಗಳ ನಾಗರಿಕರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಜೂನ್ 21ರಂದು ಅಂತಾರಾಷ್ಟ್ರೀಯ ಯೋಗದಿನವನ್ನಾಗಿ ಆಚರಿಸಬೇಕು ಎಂದು ಕರೆ ನೀಡಿದರು". 193 ರಾಷ್ಟ್ರಗಳು ಈ ಕರೆಗೆ ಸ್ಪಂದಿಸಿದಾಗ, ವಿಶ್ವಸಂಸ್ಥೆಯು ಆ ದಿನವನ್ನು ಘೋಷಿಸಿತು. ಅಂದಿನಿಂದ ಇಲ್ಲಿನ ವರೆಗೆ ಏಳು ಐಡಿವೈಗಳು ನಡೆದು 35 ಇಸ್ಲಾಮಿಕ್ ರಾಷ್ಟ್ರಗಳೂ ಸೇರಿದಂತೆ 200 ದೇಶಗಳು ಈ ದಿನವನ್ನು ಉತ್ಸಾಹದಿಂದ ಆಚರಿಸಿವೆ. 150 ಕೋಟಿಗೂ ಹೆಚ್ಚು ಜನರು ಭಾಗವಹಿಸಿದ್ದಾರೆ. ಜೂನ್ 21, 2022ರಂದು ಮೈಸೂರಿನಲ್ಲಿ 8ನೇ ಐಡಿವೈ ಅನ್ನು ಪ್ರಧಾನಮಂತ್ರಿಗಳು ಉದ್ಘಾಟಿಸಲಿದ್ದಾರೆ.

**ವಿಪ್ರನುಡಿ : ಯುವ ಜನತೆಗೆ ತಮ್ಮ ಸಂದೇಶವೇನು?**

**ಡಾ। ಎಚ್.ಆರ್.ಎನ್:** ಯೋಗವು ಭಾರತದ ಅತ್ಯಂತ ಪ್ರಾಚೀನ ಜೀವನ ಶೈಲಿ, ವಿಧಾನ. ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ಕೇವಲ 10 ನಿಮಿಷಗಳ ಪ್ರಾಣಾಯಾಮ, ಧ್ಯಾನ ಬಹಳಷ್ಟು ವೈಯಕ್ತಿಕ ಲಾಭಗಳನ್ನು ನೀಡುತ್ತದೆ. ನಮ್ಮ ಪ್ರಾಚೀನ ಗ್ರಂಥಗಳಾದ ಉಪನಿಷತ್ತುಗಳು, ಮಾಂಡೂಕ್ಯಕಾರಿಕೆ, ಪತಂಜಲಿ ಯೋಗಸೂತ್ರಗಳು, ಯೋಗವಾಸಿಷ್ಠಗಳನ್ನು ಆಧರಿಸಿ ಹಲವಾರು ಯೋಗಿಕ ತಂತ್ರಗಳನ್ನು ಆವಿಷ್ಕರಿಸಿದ್ದೇವೆ. ಅವು ವೈಜ್ಞಾನಿಕವಾಗಿ ಸಾಬೀತಾಗಿ ಈಗಾಗಲೇ ರಾಷ್ಟ್ರೀಯ, ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಆ ಯೋಗ ವಿಧಾನಗಳನ್ನು ನಿಯಮಿತವಾಗಿ ಅಭ್ಯಾಸ ಮಾಡುವುದರಿಂದ ಜನರು ತಮ್ಮಲ್ಲಿರುವ ಒತ್ತಡಗಳಿಂದ ದೂರವಾಗಿ, ಸಮಗ್ರ ವ್ಯಕ್ತಿತ್ವ ವಿಕಾಸವಾಗುತ್ತದೆ. ಇದರಿಂದ ಕೌಟುಂಬಿಕ ಸಾಮಾಜಿಕ, ರಾಷ್ಟ್ರ ಕಲ್ಯಾಣ ಉಂಟಾಗುತ್ತದೆ. ಭಾರತವು ಹಿಂದಿನಂತೆಯೇ **"ವಿಶ್ವಗುರು"** ವಾಗಲಿದೆ. ಇದಕ್ಕಾಗಿ ನಾವೆಲ್ಲರೂ ಒಟ್ಟುಗೂಡಿ ಶ್ರಮಿಸೋಣ.

**ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ**

## ಪಿಂಚಣಿ ಯೋಜನೆಗೆ ಪ್ರಾಯೋಜಕತ್ವಕ್ಕಾಗಿ ಮನವಿ

ಸಂಕಷ್ಟದಲ್ಲಿರುವ ಅರ್ಹ ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ ಮುಂದಿನ ದಿನಗಳಲ್ಲಿ ಮಾಸಿಕ ಸಹಾಯ ಧನವಾಗಿ 'ಪಿಂಚಣಿ' ನೀಡಲು ಯೋಜಿಸಲಾಗಿದೆ. ಸಮಾಜದ ಉಳ್ಳವರು, ಮತ್ತು ಸಬಲರು ಈ ಯೋಜನೆಗೆ ಪ್ರಾಯೋಜಕರಾಗಿ ಮುಂದೆ ಬಂದು ಅಪೂರ್ವವಾದ ಯೋಜನೆಗೆ ಕಾರ್ಯ ರೂಪಕ್ಕೆ ಬರುವಂತೆ ನೆರವಾಗಬೇಕೆಂದು ಮಹಾಸಭೆಯ ಅಧ್ಯಕ್ಷರು ವಿನಂತಿಸಿಕೊಂಡಿದ್ದಾರೆ. ಒಂದು ವರ್ಷಕ್ಕೆ 6000ರೂಗಳನ್ನು ನೀಡಿ ಪ್ರಾಯೋಜಕರಾದಲ್ಲಿ ಅವರದೆ ಹೆಸರಿನಲ್ಲಿ ಈ ಹಣದಿಂದ ಒಬ್ಬರಿಗೆ 12 ತಿಂಗಳು 500ರೂಗಳಂತೆ ತಿಂಗಳಿಗೆ ಸಹಾಯಧನ ರೂಪದಲ್ಲಿ ಪಿಂಚಣಿಯನ್ನು ನೀಡಲು ಯೋಜಿಸಿದೆ. ಆದ್ದರಿಂದ ಕನಿಷ್ಠ 6,000 ರೂಗಳನ್ನು ನೀಡಿ ಪ್ರಾಯೋಜಕರಾಗಲು ಕೋರಿದೆ. ಪ್ರಾಯೋಜಕರ ಹೆಸರನ್ನು ಮಹಾಸಭೆಯ ಜಾಲತಾಣ ಹಾಗೂ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು.

–ಪ್ರಧಾನ ಕಾರ್ಯದರ್ಶಿಗಳು

# ಸುಬೋಧರಾಮರಾಯರು

ಸುರೇಶ್ ಮೂನ



ಡಾ. ಅನಂತಪದ್ಮನಾಭರಾವ್ ಸಂಪಾದಿಸಿರುವ ಸಮಗ್ರದಾಸ ಸಾಹಿತ್ಯದ 27ನೇ ಸಂಪುಟದಲ್ಲಿ ಬೆಂಗಳೂರಿನ ಕೆಲವು ಹರಿದಾಸರ ಪರಿಚಯವಿದ್ದು ಅವರುಗಳ ಕೀರ್ತನೆಗಳ ಸಂಗ್ರಹವನ್ನೂ ಅದರಲ್ಲಿ ನೀಡಲಾಗಿದೆ.

ದಾಸರ ಲಕ್ಷ್ಮೀನಾರಾಯಣ ರಾಯರು, ವರವಣೀರಾಮ ರಾಯರು, ಹಾಗು ಸುಬೋಧರಾಮ ರಾಯರು ಈ ನಗರದ ಅಂತಹ ಪ್ರಮುಖ ದಾಸವರೇಣ್ಯರಾಗಿದ್ದವರು. ಈಮೂವರು ಮಹನೀಯರು ಲಾಲ್‌ಬಾಗ್ ಅಥವಾ ಬ್ಯೂಗಲ್‌ರಾಕ್ ಪಾರ್ಕ್ ನಲ್ಲಿ ಕುಳಿತು ಹರಿದಾಸರ ಬಗ್ಗೆ ಚರ್ಚಿಸಿ ಮುದ್ರಣಕ್ಕೆ ಸಿದ್ಧಗೊಳಿಸುತ್ತಿದ್ದ ವಿಷಯಗಳನ್ನು 1925ರಿಂದ 29ರ ಅವಧಿಯಲ್ಲಿ 'ಕರ್ಣಾಟಕ ಹರಿದಾಸಕೀರ್ತನತರಂಗಿಣಿ' ಮಾಲೆಯ ಮೂಲಕ ಎರಡು ಸಾವಿರ ಪುಟಗಳಲ್ಲಿ ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಕನಕದಾಸರು, ವಿಜಯ ದಾಸರು, ಗೋಪಾಲದಾಸರು, ಜಗನ್ನಾಥದಾಸರು ಹಾಗೂ ಮೋಹನದಾಸರ ಕೀರ್ತನೆಗಳ ಸಂಗ್ರಹವನ್ನು ಪ್ರಕಟಿಸಿದವರು ಸುಬೋಧರಾಮ ರಾಯರು. ನಾಲ್ಕು ದಶಕಗಳ ಹಿಂದೆಯೇ ಜಗನ್ನಾಥದಾಸರ' ಶ್ರೀಹರಿಕಥಾಮೃತಸಾರ' ವನ್ನು ಟೀಕಾತಾತ್ಪರ್ಯ ಸಮೇತ ಬರೆದವರು. 'ಹರಿದಾಸ ಸುಧಾ ಬಿಂದು' ಎಂಬ ಶೀರ್ಷಿಕೆಯಡಿ ಯಲ್ಲಿ ಸಾವಿರದ ಏಳುನೂರ ಹದಿನಾಲ್ಕು ಬಿಂದು ಗಳೆಂಬ ಸೂಕ್ತಿಗಳನ್ನು ಸಂಗ್ರಹಿಸಿದ್ದಾರೆ. ಹೀಗೆ, ಇವರು ಇಲ್ಲಿನ ಹರಿದಾಸ ಪರಂಪರೆಗೆ ಸಲ್ಲಿಸಿರುವ ಸೇವೆ ಇಂದಿನ ಪೀಳಿಗೆಯ ಸಂಶೋಧಕರಿಗೆ. ಅಧ್ಯಯನಾಸಕ್ತರಿಗೆ ಉಪಯುಕ್ತ ಆಕರವಾಗಿದೆ.

ಹಾಗೆಯೆ, 'ಸುಬೋಧಕುಸುಮಾಂಜಲಿ' ಸಾಹಿತ್ಯಮಾಲೆ ಮತ್ತು 'ಸುಬೋಧ' ಪತ್ರಿಕೆಇಲ್ಲಿನ ಸಾಹಿತ್ಯ ಮತ್ತು ಪತ್ರಿಕೋದ್ಯಮಕ್ಕೆ ಇವರು ನೀಡಿರುವ ಪ್ರಮುಖ ಕೊಡುಗೆಯಾಗಿದೆ. ಸದ್ವಿಚಾರಗಳನ್ನು ಜನಮನದಲ್ಲಿ ಹರಡುವ ಸಲುವಾಗಿ ಪ್ರಾರಂಭವಾದದ್ದು 'ಸುಬೋಧ ಕುಸುಮಾಂಜಲಿ' ಗ್ರಂಥಮಾಲೆ. ಶಿಕ್ಷಕರಾಗಿಯೂ ಸೇವೆ ಸಲ್ಲಿಸಿದ್ದ ರಾಮರಾಯರು, ಮಕ್ಕಳು ತಮ್ಮ ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ರೂಪಿಸಿಕೊಳ್ಳಬೇಕಾದರೆ ನಮ್ಮ ಪೂರ್ವಜರ ಹಿರಿಮೆ, ಗರಿಮೆ, ನಾಡಿಗಾಗಿ ಸಲ್ಲಿಸಿದ ಸೇವೆ,ತ್ಯಾಗ ಮುಂತಾದ ಸಂಗತಿಗಳನ್ನು ಸರಳ ಭಾಷೆಯಲ್ಲಿ ಅವರಿಗೆ ತಿಳಿಸಿಕೊಡುವ ಅವಶ್ಯಕತೆಯಿರುವುದನ್ನು ಗಮನಿಸಿದ್ದರು. ಅಲ್ಲದೆ1920ರ ಸಮಯದಲ್ಲಿ ಮಕ್ಕಳು ಓದುತ್ತಿದ್ದ ಪಠ್ಯ ಪುಸ್ತಕಗಳಲ್ಲೂ ಬ್ರಿಟಿಷರ ಅಳ್ವಿಕೆಯ ವೈಖರಿಯ ವರ್ಣನೆಗೆ ಹೆಚ್ಚು ಪ್ರಾಮುಖ್ಯತೆಯಿತ್ತು. ಹೀಗಾಗಿ, ನಮ್ಮದೇಶದ ಮಹಾಮಹಿಮರ ಜೀವನ ಚರಿತ್ರೆಯನ್ನು ತಿಳಿಸುವ ಈ ಪುಸ್ತಕಮಾಲೆ ಬಹು ಬೇಗ ಜನಪ್ರಿಯವಾಯಿತು. ಪೌರಾಣಿಕ ಕಾಲದಿಂದ ಹಿಡಿದು 1933ರವರೆಗೂ ಭಾರತದ ಬೇರೆ ಬೇರೆ ಕಾಲ ಮತ್ತು ಪ್ರದೇಶಗಳಲ್ಲಿ ಹಲವಾರು ಮಹಿಳೆಯರು ಮತ್ತು ಪುರುಷರು ನಮ್ಮ ನಾಡಿನ ಏಳ್ಗೆಗಾಗಿ ಸಲ್ಲಿಸಿದ ಅಮೋಘ ಸೇವೆಯನ್ನು ಪರಿಚಯಿಸಿದರು. ಪ್ರಾರಂಭದಲ್ಲಿ ಮಾಹಿತಿ ಸಂಗ್ರಹ ಮತ್ತು ಮುದ್ರಣಕ್ಕಾಗಿ ಕಷ್ಟ ಪಡಬೇಕಾಯಿತಾದರೂ ಮುಂದೆ ಚಾಮರಾಜ ಪೇಟೆಯಲ್ಲಿ ತಮ್ಮದೇ ಸ್ವಂತ ಮುದ್ರಣಾಲಯವನ್ನು ಪ್ರಾರಂಭಿಸಿ ತನ್ಮೂಲಕ ಈ ಕುಸುಮಗಳ ಕಂಪು ನಾಡಿನಾದ್ಯಂತ ಪಸರಿಸುವಂತೆ ಮಾಡಿದರು.

'ಸುಬೋಧ' ಮಾಸಪತ್ರಿಕೆಯ ಮೂಲಕ ರಾಮರಾಯರುಇಲ್ಲಿನ ಪತ್ರಿಕಾರಂಗಕ್ಕೂ ಉತ್ತಮ ಸೇವೆ ಸಲ್ಲಿಸಿದ್ದಾರೆ. ನಮ್ಮ ನಾಡಿನ ಜನತೆಯು ಭಾಷಾಭಿಮಾನ, ವಾಚನಾಭಿರುಚಿ, ವಿವೇಚನೆ ಮುಂತಾದ ಸಂಗತಿಗಳನ್ನು ರೂಢಿಸಿಕೊಳ್ಳಲು ಪೂರಕವಾಗುವ ಹಾಗೆ ಸುಬೋಧ ಪತ್ರಿಕೆಯನ್ನು ನಾಲ್ಕೂ ದಶಕಗಳಿಗೂ ಹೆಚ್ಚು ಕಾಲ ನಡೆಸಿದರು. ಕೆ.ಆರ್. ರಸ್ತೆಯಲ್ಲಿನ ಮಾಧ್ವಯುವಕ ಸಂಘ, ಚಾಮರಾಜಪೇಟೆಯ ಐದನೇ ಮೇನ್‌ರಸ್ತೆಯ ಶ್ರೀಮನ್ಮಾಧ್ವಸಂಘ ದಂತಹ ಸಂಘ ಸಂಸ್ಥೆಗಳ ಸ್ಥಾಪನೆ ಮತ್ತು ಬೆಳವಣಿಗೆಯಲ್ಲೂ ಪ್ರಮುಖ ಪಾತ್ರವನ್ನು ವಹಿಸಿದ ಇವರು1948ರಿಂದ 1951ರವರೆಗೆ ಬೆಂಗಳೂರು ನಗರ ಮುನಿಸಿಪಲ್ ಕೌನ್ಸಿಲರಾಗಿದ್ದಾಗ ಪತ್ರಿಕೋದ್ಯಮಿ ಗಳಿಗೆ ಒಂದು ಪ್ರತ್ಯೇಕ ಬಡಾವಣೆ ರೂಪುಗೊಳ್ಳುವಲ್ಲೂ ಪ್ರಮುಖ ಪಾತ್ರ ವಹಿಸಿದ್ದರು.

'ಮೈಸೂರಿನ ರಾಜ್ಯಲಕ್ಷ್ಮಿಯರು' ಎಂಬ ಇವರ ಪುಸ್ತಕವನ್ನು ಆಗಿನ ಮೈಸೂರು ಸಂಸ್ಥಾನದ ಲೊಯರ್ ಸೆಕೆಂಡರಿ ತರಗತಿಗೆ ಪಠ್ಯವನ್ನಾಗಿ ಮಾಡಲಾಗಿತ್ತು. ಕೆಂಗಲ್ ಹನುಮಂತಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಇವರಿಗೆ 'ಜ್ಞಾನಶಿಲ್ಪಿ' ಎಂಬ ಬಿರುದನ್ನು ನೀಡಿ ಗೌರವಿಸಲಾಯಿತು.

ಬೆಂಗಳೂರಿನ ಕನ್ನಡ ಕೂಟವು ಕೆ. ಸಂಪದ್ಗಿರಿರಾಯರ ಅಧ್ಯಕ್ಷತೆ ಯಲ್ಲಿ ನಡೆದ ಸಮಾರಂಭದಲ್ಲಿ ಇವರನ್ನು ಸನ್ಮಾನಿಸಿತು.

1990ರಲ್ಲಿ ಸುಬೋಧರಾಮರಾಯರ ಜನ್ಮಶತಮಾನೋತ್ಸವ ಸಮಿತಿಯು, ಪ್ರೊ.ಎಲ್.ಎಸ್ ಶೇಷಗಿರಿರಾವ್ ಅವರು ರಾಯರ ಜೀವನ ಚರಿತ್ರೆಯನ್ನು ಕುರಿತು ಬರೆದ 'ಸಾರ್ಥಕ ಬದುಕು' ಪುಸ್ತಕವನ್ನು ಹೊರತರುವ ಮೂಲಕ ಗೌರವ ಸಲ್ಲಿಸಿತು.

ಒಟ್ಟಿನಲ್ಲಿ, ಹೇಗೆ ಒಬ್ಬ ವ್ಯಕ್ತಿ ಸಮಾಜಮುಖಿಯಾಗಿರ ಬಹುದೆಂಬುದಕ್ಕೆ ಇಂದಿನವರಿಗೆ ಮಾದರಿಯಾಗಿದ್ದ ರಾಮರಾಯರು 1970ರ ಮಾರ್ಚ್ 14ರಂದು ದೈವಾಧೀನರಾದರು.

ಋಷಿಗಳ ಸಂದೇಶ-2

# ಸತ್ಯಕಾಮ ಜಾಬಾಲ

ಎಸ್. ಶ್ರೀಧರಮೂರ್ತಿ

ಕಳೆದ ಸಂಚಿಕೆಯಲ್ಲಿ ನಾವು ಬೃಹದಾರಣ್ಯಕ ಉಪನಿಷತ್ತಿನ ಒಂದು ಆಖ್ಯಾಯಿಕೆಯನ್ನು ನೆನಪಿಸಿಕೊಂಡೆವು.

ಈ ಸಂಚಿಕೆಯಲ್ಲಿ ಛಾಂದೋಗ್ಯ ಉಪನಿಷತ್ತಿನ 'ಸತ್ಯಕಾಮ ಜಾಬಾಲ' ರ ಒಂದು ಸುಂದರ ಆಖ್ಯಾಯಿಕೆಯನ್ನು ನೆನೆಯೋಣ. ಛಾಂದೋಗ್ಯ ಉಪನಿಷತ್ತು ಸಾಮವೇದಕ್ಕೆ ಸೇರಿದ ಉಪನಿಷತ್ತು. ಈ ಉಪನಿಷತ್ತಿನಲ್ಲಿ ಅಧ್ಯಾತ್ಮ ವಿದ್ಯೆಗಳ ಬಗ್ಗೆ ಮತ್ತು ಉಪಾಸನಾ ಕ್ರಮಗಳ ಬಗ್ಗೆ ಸವಿಸ್ತಾರ ವಿವರಣೆಗಳಿವೆ.

ಸತ್ಯಕಾಮ ಜಾಬಾಲನೆಂಬ ವಟುವು ವಿದ್ಯಾರ್ಜನೆಗಾಗಿ ಹಾರಿದ್ರುಮತರು ಎಂಬ ಋಷ್ಯಾಚಾರ್ಯರು ನಡೆಸುತ್ತಿದ್ದ ಗುರು ಕುಲಕ್ಕೆ ಬಂದು ವಿನೀತನಾಗಿ ವಿದ್ಯಾ ಭಿಕ್ಷೆ ಬೇಡಿದನು. ಅವನನ್ನು ಗುರುಕುಲಕ್ಕೆ ಸೇರಿಸಿಕೊಂಡ ಹಾರಿದ್ರುಮತರು ಅವನಿಗೆ ತೀರ ಬಡಕಲಾದ ಹಸುಗಳನ್ನು ಕೊಟ್ಟು, ಅವುಗಳನ್ನು ಕಾಡಿಗೆ ಕೊಂಡೊಯ್ದು ಸೇವೆ ಮಾಡಿ ಹಿಂತಿರುಗುವಂತೆ ಆದೇಶಿಸಿದರು. ಸುಮಾರು ನಾನ್ನೂರು ಹಸುಗಳು ಎಂದು ಶೃತಿ ಹೇಳುತ್ತದೆ.

ಸತ್ಯಕಾಮ ಗುರುಕುಲಕ್ಕೆ ಬಂದ್ದದು ವಿದ್ಯಾರ್ಜನೆಗಾಗಿ, ಆದರೆ ಗುರು ಆದೇಶಿಸಿದ್ದು ಗೋಮಾತೆಯ ಸೇವೆ. ಗುರುಸೇವೆ ಮತ್ತು ಗುರುವಹಿಸಿದ ಸೇವಾ ಕೈಂಕರ್ಯಗಳನ್ನು ಸಾಧನೆಯ ಅಂಗ ಎಂದು ಗುರುಕುಲದ ವಿದ್ಯಾರ್ಥಿಗಳು ಶಿರಸಾವಹಿಸಿ ಪಾಲಿಸುತ್ತಿದ್ದರು. ಸತ್ಯಕಾಮ ಗುರುಕುಲದಿಂದ ತೆರಳುವಾಗ ಮನಸ್ಸಿನಲ್ಲಿ ಸಂಕಲ್ಪ ಮಾಡಿದ "ಇವು ಸಾವಿರವಾಗುವವರೆಗೂ ಹಿಂತಿರುಗುವುದಿಲ್ಲ" ಎಂದು. ಆ ಎಳೆಯ ವಯಸ್ಸಿಗೆ (ಸುಮಾರು 8 ರಿಂದ 9ವರ್ಷ) ಎಂತಹ ಶ್ರದ್ಧೆ. ಶ್ರದ್ಧೆ ಸತ್ಯಕಾಮನನ್ನು ಆವರಿಸಿತು.

ಸತ್ಯಕಾಮನು ಆ ಹಸುಗಳೊಡನೆ ದಟ್ಟ ಕಾಡಿನ ಕಡೆ ಹೊರಟ. ಅಂದಿನಿಂದ ಆ ಹಸುಗಳ ಪಾಲನೆ, ಪೋಷಣೆ ಮತ್ತು ಖಡ್ಗಮೃಗ ಗಳಿಂದ ಅವುಗಳ ರಕ್ಷಣೆ ಇವೇ ಆತನ ದಿನಚರಿಯಾಯಿತು. ಅತ್ಯಂತ ಪ್ರೀತಿಯಿಂದ ಅವುಗಳೊಡನೆ ಒಡನಾಟ ಮತ್ತು ಅವುಗಳ ಸೇವೆಯನ್ನು ಆಧ್ಯಾತ್ಮಸಾಧನೆಯಂತೆ ಅತ್ಯಂತ ನಿಷ್ಠೆಯಿಂದ ಸಲ್ಲಿಸುತ್ತಾ ಬಂದನು.

ಈ ಹಸುಗಳ ಹಿಂಡಿನಲ್ಲಿ ಕೆಲವು ವೃಷಭಗಳೂ ಇದ್ದವು. ಕಾಲಕಳೆದಂತೆ ನೈಸರ್ಗಿಕವಾಗಿ ಹಸುಗಳ ಸಂತತಿಯೂ ವೃದ್ಧಿ ಗೊಂಡಿತು. ಅದರ ಪರಿವೆಯೂ ಅವನಿಗೆ ಇರಲಿಲ್ಲ. ಸದಾ ಅವುಗಳ ಪಾಲನೆ, ಪೋಷಣೆಯಲ್ಲೆ ಮುಳುಗಿದ್ದ.

ಒಂದು ದಿನ ಎಂದಿನಂತೆ ದಿನಚರ್ಯೆ ಮುಗಿಸಿ ಮುಸ್ಸಂಜೆ ಯಾಗಲು ಅವುಗಳ ರಕ್ಷಣೆಯಲ್ಲಿ ನಿರತನಾದ. ಆಗ ಆ ಹಸುಗಳ ಹಿಂಡಿನಿಂದ ಒಂದು ವೃಷಭವು ಮಾತನಾಡಿತು. "ಸತ್ಯಕಾಮನೇ ನಾವು ಸಾವಿರ ಸಂಖ್ಯೆ ವೃದ್ಧಿಸಿದ್ದೇವೆ. ನಮ್ಮನ್ನು ಗುರುಕುಲಕ್ಕೆ ಕರೆದೊಯ್ಯಬಹುದು ಎಂದಿತು". ಸತ್ಯಕಾಮ ತಲೆ ಎತ್ತಿ ನೋಡಿದ ವೃಷಭ ಮಾತಾಡುತ್ತಿದೆ. ಅವನು ಶ್ರದ್ಧಾ ಆವೇಶವಾದ್ದರಿಂದ ಅದು ದೈವಸಂದೇಶ ಎಂದು ಮನಗಂಡು, ಆಗಲಿ ಪ್ರಭುವೆ ಎಂದನು. ಸತ್ಯಕಾಮನ ಈ ನಿಸ್ವಾರ್ಥ ಸೇವೆಯನ್ನು ಶ್ರದ್ಧೆಯನ್ನು ಕಂಡು ಪ್ರಕೃತಿ ಸಂತುಷ್ಟವಾಯಿತು. ವಾಯುದೇವತೆಯು ವೃಷಭವನ್ನು ಹೊಕ್ಕು ಈ ರೀತಿ ನುಡಿದನು.

ಮಾರನೆಯ ದಿನ ಹಸುಗಳ ಹಿಂಡಿನೊಡನೆ ಸಂತೋಷದಿಂದ ಸತ್ಯಕಾಮನು ಗುರುಕುಲದ ಕಡೆ ಮರುಪ್ರಯಾಣ ಬೆಳೆಸಿದನು. ದಾರಿಯಲ್ಲಿ ಸಂಜೆಯಾಗಲು ಅವುಗಳಿಗೆ ವಿಶ್ರಾಂತಿ ಕೊಟ್ಟು ತಾನು ಒಂದು ಅಗ್ನಿ ಪ್ರತಿಷ್ಠಾಪಿಸಿ ಅವುಗಳ ರಕ್ಷಣೆಗಾಗಿ ಕುಳಿತಿದ್ದನು. ಆಗ ವಾಯುದೇವನು ವೃಷಭದ ಮೂಲಕ ಮಾತನಾಡಿ, ಸತ್ಯಕಾಮ ನಿನ್ನ ಸೇವೆಗೆ, ನಿಷ್ಠೆಗೆ ಮೆಚ್ಚಿದ್ದೇನೆ. ಸತ್ಯಕಾಮನೇ ಪರಬ್ರಹ್ಮತತ್ವ ಹದಿನಾರು ಕಲೆಗಳಿಂದ ಕೂಡಿದೆ. ಅದು ನಾಲ್ಕು ಪಾದಗಳ ವಿಂಗಡನೆಗೊಂಡಿದೆ. ಒಂದೊಂದು ಪಾದವೂ ನಾಲ್ಕು ಕಲೆಗಳುಳ್ಳದ್ದು. ಈ ರೀತಿ ಪರಬ್ರಹ್ಮತತ್ವ ನಾಲ್ಕು ಪಾದಗಳಿಂದ ಕೂಡಿದೆ. ಮಗು ಸತ್ಯಕಾಮ ನಾನು ನಿನಗೆ ಪರಬ್ರಹ್ಮದ ಮೊದಲನೆ ಪಾದವನ್ನು ಉಪದೇಶಿಸುತ್ತೇನೆ.

ಮಗು ಬ್ರಹ್ಮದ ಮೊದಲನೆ ಪಾದದ ಕಲೆಗಳೇ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳು. ಈ ದಿಕ್ಕುಗಳೆಲ್ಲವೂ ಪರಬ್ರಹ್ಮ ವಸ್ತುವಿನಿಂದ ವ್ಯಾಪಿಸಿದೆ. ಆ ಬ್ರಹ್ಮದಿಂದಲೇ ಈ ದಿಕ್ಕುಗಳು ಬೆಳಗುತ್ತಿರುವುದು ಅಥವ ಪ್ರಕಟಗೊಂಡಿರುವುದು. ನೀನು ಈ ಬ್ರಹ್ಮವನ್ನು "ಪ್ರಕಾಶವಾನ್" ಎಂದು ಉಪಾಸಿಸಬೇಕು. ನಮ್ಮ ಶಾಸ್ತ್ರದಲ್ಲಿ ದಿಕ್ಕುಗಳಿಗೆ ಬಹಳ ಮಹತ್ವವಿದೆ ಯಾವುದೇ ತರಹದ ಪೂಜೆಯಾಗಲೀ ನಿರ್ದಿಷ್ಟ ದಿಕ್ಕನ್ನು ಸೂಚಿಸಿ ಅದರಂತೆ ಪೂಜಿಸಲು ಹೇಳಿದೆ. ವಾಸ್ತು ಪೂಜಾದಿಗಳಲ್ಲಿಯೂ ದಿಕ್ಕಿಗೆ ಮಹತ್ವವಿದೆ. ವಾಸ್ತುವನ್ನೇ ತೀರನಂಬಿ ಮೂಢರಾಗಬೇಕಾಗಿಲ್ಲ. ದೇಶ, ಕಾಲ, ದೇಹ, ಧರ್ಮ ತಿಳಿದು ಧರ್ಮವನ್ನು ಆಚರಿಸಬೇಕು. ಎಲ್ಲ ದಿಕ್ಕುಗಳಲ್ಲಿಯೂ ಪರಬ್ರಹ್ಮನೇ ವ್ಯಾಪಿಸಿದ್ದಾನೆ. ಅವನೇ ಪ್ರಕಟರೂಪದಲ್ಲಿದ್ದಾನೆ. ಅವನನ್ನು ಪ್ರಕಾಶ ಎಂದು ಉಪಾಸಿಸು ಎಂದು ತಿಳಿಸಿದನು. ಸತ್ಯಕಾಮ ವಿನೀತನಾಗಿ ಈ ಉಪದೇಶವನ್ನು ಸ್ವೀಕರಿಸಿದನು.

ನಂತರ ಬೆಳಿಗ್ಗೆ ಮತ್ತೆ ಗುರುಕುಲದೆಡೆಗೆ ಪ್ರಯಾಣ ಮುಂದವರೆಸಿದ. ಅಂದು ಸಂಜೆ ಗೋಸೇವೆಯ ನಂತರ, ಅಗ್ನಿಷ್ಠಿಕೆಯ ಮುಂದೆ ಕುಳಿತು ಹಿಂದಿನ ದಿನ ವಾಯುದೇವರು ಉಪದೇಶಿಸಿದ ತತ್ವದ ಬಗ್ಗೆ ಮನನಮಾಡುತ್ತಿದ್ದನು. ಆಗ

ಅಗ್ನಿದೇವನು ಪ್ರತ್ಯಕ್ಷನಾಗಿ ಮಗು ಸತ್ಯಕಾಮ ನಿನ್ನ ಶ್ರದ್ಧೆ ನನಗೆ ಬಹಳ ಮೆಚ್ಚುಗೆಯಾಗಿದೆ. ನಾನು ನಿನಗೆ ಬ್ರಹ್ಮದ ಎರಡನೇ ಪಾದವನ್ನು ಉಪದೇಶಿಸುತ್ತೇನೆ.

ಮಗು ಸತ್ಯಕಾಮ, ಪೃಥ್ವಿ, ಅಂತರಿಕ್ಷ, ದ್ಯುಲೋಕ, ಸಮುದ್ರ ಈ ನಾಲ್ಕು ಕಲೆಗಳೂ ಬ್ರಹ್ಮದ ಎರಡನೇ ಪಾದ. ಇದನ್ನು ನೀನು 'ಅನಂತ' ಎಂದು ಉಪಾಸಿಸಬೇಕು. ಎಲ್ಲ ಲೋಕವೂ ಪರಬ್ರಹ್ಮದಿಂದಲೇ ಹಾಸುಹೊಕ್ಕಾಗಿದೆ. ಪರಬ್ರಹ್ಮ ವಸ್ತುವಿಲ್ಲದ ಲೋಕವಿಲ್ಲ. ಅದು ಅನಂತವು.

ಮರುದಿನ ಸೂರ್ಯೋದಯದ ನಂತರ ಹಸುಗಳೊಡನೆ ಪ್ರಯಾಣ ಮುಂದುವರೆಸಿದ. ಸಂಜೆ ವೇಳೆ ಅವುಗಳಿಗೆ ವಿಶ್ರಾಂತಿಗೆ ಅನುವು ಮಾಡಿ, ಅವುಗಳ ರಕ್ಷಣೆಗೆ ಬದ್ಧನಾದ. ವಾಯುದೇವ ಮತ್ತು ಅಗ್ನಿ ದೇವರು ನೀಡಿದ ಉಪದೇಶದ ಬಗ್ಗೆ ಮಗ್ನನಾದ. ಆಗ ಅವನಲ್ಲಿ ಪ್ರಸನ್ನನಾದ ಸೂರ್ಯ ದೇವನು ಒಂದು ಹಂಸಪಕ್ಷಿಯ ರೂಪದಲ್ಲಿ ಬಂದು ಮಗು, ಸತ್ಯಕಾಮ ನಾನು ನಿನಗೆ ಪರಬ್ರಹ್ಮದ ಮೂರನೇ ಪಾದವನ್ನು ತಿಳಿಸಿಕೊಡುತ್ತೇನೆ ಎಂದನು.

"ಅಗ್ನಿ, ಸೂರ್ಯ, ಚಂದ್ರ, ಮಿಂಚು" ಇವು ಪರಬ್ರಹ್ಮದ ನಾಲ್ಕು ಕಲೆಗಳು. ಅವುಗಳಲ್ಲಿ ಆ ಪರಬ್ರಹ್ಮವೇ ಅಂತರ್ಯಾಮಿಯಾಗಿದೆ. ನೀನು ಈ ಕಲೆಯನ್ನು ಜ್ಯೋತಿಷ್ಮನ್ ಎಂದು ಉಪಾಸಿಸಬೇಕು ಎಂದು ಉಪದೇಶಿಸಿದನು. ಸೂರ್ಯ, ಚಂದ್ರ, ಅಗ್ನಿ, ಮಿಂಚು ಇವೆಲ್ಲಾ ಪರಬ್ರಹ್ಮದ ಪ್ರತ್ಯಕ್ಷ ಪ್ರಮಾಣಗಳು. ಅವುಗಳೆಲ್ಲವನ್ನೂ ಬೆಳಗುತ್ತಿರುವುದೇ ಅವುಗಳ ಅಂತರ್ಯಾಮಿ ಪರಬ್ರಹ್ಮತತ್ವ.

ಜ್ಯೋತಿರ್ಪುರುಷನೇ, ಆಗಲಿ ಪ್ರಭು ಎಂದು ಸತ್ಯಕಾಮನು ವಿನೀತಭಾವದಿಂದ ವಂದಿಸಿ ಧ್ಯಾನಾಸಕ್ತನಾದನು. ನಂತರ ಮರುದಿನ ಯಥಾಪ್ರಕಾರ ಗುರುಕುಲದತ್ತ ಪ್ರಯಾಣ ಪ್ರಾರಂಭಿಸಿದನು. ಮಾರ್ಗಮಧ್ಯದಲ್ಲಿ ಸಂಜೆಯಾಗಲು ಹಸುಗಳ ಯೋಗಕ್ಷೇಮ ನೋಡಿ ಅವುಗಳಿಗೆ ವಿಶ್ರಮಿಸಲು ಅನುವು ಮಾಡಿಕೊಟ್ಟು ತಾನು ವಾಯುದೇವ, ಅಗ್ನಿದೇವ, ಸೂರ್ಯ ದೇವರುಗಳು ಉಪದೇಶಿಸಿದ ಉಪಾಸನಾ ವಿದ್ಯೆಗಳ ಬಗ್ಗೆ 'ಚಿಂತನಾ ನಿರತನಾದನು'. ಆಗ ಪ್ರಾಣದೇವತೆಯು ಬಂದು ಮೌದ್ಗಲ ಪಕ್ಷಿ (ಮಿಂಚುಳ್ಳಿ) ರೂಪದಲ್ಲಿ ಬಂದು ಮಗು ಸತ್ಯಕಾಮ ನಾನು ನಿನಗೆ ಪರಬ್ರಹ್ಮದ ನಾಲ್ಕನೇ ಪಾದವನ್ನು ಉಪದೇಶಿಸುತ್ತೇನೆ. ಸತ್ಯಕಾಮನೇ, ಈ ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು ಈ ನಾಲ್ಕು ಬ್ರಹ್ಮದ ಕಲೆಗಳು. ಇದನ್ನು ನೀನು "ಆಯತನ" ಎಂದು ಉಪಾಸಿಸಬೇಕು. ನಮ್ಮೆಲ್ಲರ ಜೀವಿತ ಈ ಪ್ರಾಣಶಕ್ತಿಯಿಂದಲೇ ನಡೆಯುತ್ತಿದೆ. ಎಲ್ಲಾ ಜೀವಿಗಳಿಗೂ ಈ ಪ್ರಾಣನೇ ಆಧಾರ. ಆ ಪರಬ್ರಹ್ಮವೇ ಪ್ರಾಣದ ಅಂತರ್ಯಾಮಿ. ಅದರಿಂದ ಇದನ್ನು 'ಆಯತನ' ಆಧಾರ ಎಂದು ಉಪಾಸಿಸಬೇಕು ಎಂದು ಉಪದೇಶಿಸಿ ಅಂತರ್ಧಾನನಾದನು.

ಸತ್ಯಕಾಮನು ಈ ಎಲ್ಲವನ್ನೂ ಮೆಲಕು ಹಾಕುತ್ತಾ ರಾತ್ರಿ ಕಳೆದನು. ಬೆಳಗಾಗಲು ಹಸುಗಳೊಡನೆ ಗುರು ಗೃಹದತ್ತ ಪ್ರಯಾಣ ಮುಂದುವರೆಸಿದನು. ಅವನು ಹಸುಗಳೊಡನೆ ಗುರುಗೃಹ ಸಮೀಪಕ್ಕೆ ಬರುವಾಗ ಗುರುಗಳು ಅವನು ಬರುವುದನ್ನು ನೋಡಿಯೇ ಅವನಲ್ಲಿ ಬ್ರಹ್ಮಜ್ಞಾನಿಯ ಲಕ್ಷಣಗಳನ್ನು ಕಂಡನು ಮತ್ತು ದಷ್ಟಪುಷ್ಟವಾದ ಮತ್ತು ದ್ವಿಗುಣಗೊಂಡ ಹಸುಗಳ ಹಿಂಡನ್ನು ಕಂಡು ಅತ್ಯಂತ ಸಂತುಷ್ಟನಾದನು. ನಂತರದಲ್ಲಿ ಅವನನ್ನು ಕರೆದು, ಸತ್ಯಕಾಮನೇ ನೀನು ಯಾವ ಗುರುವಿನಿಂದ ಈ ಅನುಗ್ರಹ ಪಡೆದೆ ಎಂದು ಕೇಳಲು ಆಗ ಸತ್ಯಕಾಮನು ಪ್ರಭುವೇ ತಾವಲ್ಲದೆ ನನಗಿನ್ನಾರು ಗುರುಗಳು. ತಮ್ಮ ಆದೇಶದಂತೆ ಗೋಸೇವೆ ಕೈಗೊಂಡೆ. ಸಂತುಷ್ಟರಾದ ಪ್ರಕೃತಿ ದೇವತೆಗಳು ಈ ಉಪಾಸನಾ ವಿದ್ಯೆ ಅನುಗ್ರಹಿಸಿದರು. ಎಲ್ಲವೂ ತಮ್ಮ ಕೃಪೆ ಎಂದನು. ಪರಮ ಸಂತುಷ್ಟರಾದ ಗುರುಗಳು ಅವನ ಅನನ್ಯ ಶ್ರದ್ಧೆ ಮತ್ತು ಗುರುಭಕ್ತಿ ಯನ್ನು ಮನಗೊಂಡು ಅವನಿಗೆ ಶಾಸ್ತ್ರ ಮರ್ಯಾದೆಯಂತೆ ಪುನಃ ದೇವತೆಗಳು ತಿಳಿಸಿದ ಸತ್ಯವನ್ನು ಉಪದೇಶಿಸಿದರು. ಈ ವಿದ್ಯೆಗಳು ಗುರುಮುಖೇನ ಪ್ರಾಪ್ತವಾಗಬೇಕು. ಇದು ಶಾಸ್ತ್ರ ನಿಯಮ. ಆಗ ಗುರು ಕೃಪೆ ಪಡೆದು ಸತ್ಯಕಾಮ ಪರಮಪಾವನನಾದ.

ಈ ಸತ್ಯಕಾಮನ ಆಖ್ಯಾಯಿಕೆಯ ಮೂಲಕ ಉಪನಿಷತ್ತು ಮನುಜಕುಲಕ್ಕೆ ಕೆಲವು ಸಂದೇಶಗಳನ್ನು ನೀಡುತ್ತಿವೆ.

1. ಗುರುವಾಕ್ಯದಲ್ಲಿ ಶ್ರದ್ಧೆ ಮತ್ತು ಗುರುವಿನಲ್ಲಿ ಸದಾಸರ್ವದಾ ವಿನೀತ ಭಾವನಾಗಿರಬೇಕು.
2. ಗುರುಕೊಟ್ಟ ಆದೇಶವನ್ನು ಶಿರಸಾವಹಿಸಿ, ಶ್ರದ್ಧೆಯಿಂದ ಪರಿಪಾಲಿಸಿದ್ದೇ ಆದರೆ ನಮಗೆ ಎಲ್ಲ ಕಡೆಯಿಂದಲೂ ಅನುಗ್ರಹ ಸಿಕ್ಕುವುದು ನಿಶ್ಚಿತ.
3. ನಾವು ಪ್ರಕೃತಿಯೊಡನೆ ಸಹಬಾಳ್ವೆ ನಡೆಸಿ, ಪ್ರಕೃತಿಯ ಆಂತರ್ಯದಲ್ಲಿರುವ ಚೇತನ, 'ಆ ಪರಬ್ರಹ್ಮವೇ' ಎಂಬ ಬೋಧೆಯಿಂದ ಪ್ರಕೃತಿಯೊಡನೆ ಒಡನಾಡಿದ್ದೇ ಆದರೆ ಪ್ರಕೃತಿಯ ಅಂತರ್ಯಾಮಿ ಶಕ್ತಿಗಳೇ ನಮಗೆ ಮಾರ್ಗದರ್ಶಕರಾಗಿ ಉದ್ಧರಿಸುತ್ತಾರೆ.
4. ಇಲ್ಲಿ ಹೇಳಿರುವ ಉಪಾಸನಾ ವಿದ್ಯೆಗಳು ಅತ್ಯಂತ ಗಹನವಾದವು ಅವುಗಳ ರಹಸ್ಯವನ್ನು ಆಚಾರ್ಯರಿಂದಲೇ ಅರಿಯಬೇಕು.
5. ಈ ಆಖ್ಯಾಯಿಕೆಯು ನಮಗೆ ಸದಾಸರ್ವದಾ ನೆನಪಿಸುವುದು ಗುರುವಾಕ್ಯದಲ್ಲಿ ಶ್ರದ್ಧೆ, ಗುರುವಾಕ್ಯದಲ್ಲಿ ಶ್ರದ್ಧೆ, ಗುರು ವಾಕ್ಯದಲ್ಲಿ ಶ್ರದ್ಧೆ.

ಈ ಶ್ರದ್ಧೆಯನ್ನು ಆ ಪರಬ್ರಹ್ಮಶಕ್ತಿ ನಮಗೆ ಅನುಗ್ರಹಿಸಿ ಕೃಪೆ ಮಾಡಲಿ ಎಂದು ಪ್ರಾರ್ಥಿಸೋಣ.

॥ ಶುಭಮಸ್ತು ॥

# ತಿಂಗಳ ರಾಶಿ ಫಲ

–ಜ್ಯೋತಿಷಿ ವಿ॥ ಮುದ್ರಾಡಿ ವಾಸುದೇವ ಭಟ್

**ವಿಶೇಷ ಸೂಚನೆ: ವರ್ಷಕ್ಕೊಮ್ಮೆ ಸಿಗುವ ಅಧಿಯೋಗ ಈ ತಿಂಗಳಲ್ಲಿದೆ. ಚಂದ್ರನಿರುವ ರಾಶಿಯಿಂದ ಆರು, ಏಳು, ಎಂಟನೇ ರಾಶಿಯಲ್ಲಿ ಬುಧ, ಗುರು ಮತ್ತು ಶುಕ್ರರಿದ್ದರೆ ಈ ಯೋಗ ಉಂಟಾಗುವುದು. ಈ ತಿಂಗಳ 10, 11 ಮತ್ತು 12ನೇ ತಾರೀಖುಗಳಂದು ಆ ಯೋಗ ಇರುವುದು. ಮಕ್ಕಳು ಹುಟ್ಟಿದರೆ ರಾಜಯೋಗ ಉಂಟಾಗುವುದು. ಆ ಸಮಯದಲ್ಲಿ ಪ್ರಾರಂಭಿಸಿದ ವ್ಯವಹಾರಾದಿ ಗಳಿಗೂ ರಾಜಯೋಗದ ಫಲ ಅಂದರೆ ಉತ್ತರೋತ್ತರ ಅಭಿವೃದ್ಧಿ ಉಂಟಾಗಲಿರುವುದು.**

**ಇದರಂತೆ ಲಗ್ನಾಧಿಯೋಗವೂ ಇರುವುದು. ಅಂದರೆ ತುಲಾ ಲಗ್ನಕ್ಕೆ ಅಧಿಯೋಗ ಉಂಟಾಗುವುದು. ಜೂನ್ ತಿಂಗಳ 1, 2, 3, 8, 9, 10, 15, 16, 21, 27 ಮತ್ತು 30ನೇ ತಾರೀಖುಗಳಂದು ಗಜಕೇಸರಿಯೋಗ ಹಾಗೂ ಹಂಸಮಹಾಪುರುಷ ಯೋಗಗಳಿರುವುದು. 'ಕಿಂಕುರ್ವಂತಿಗ್ರಹಾಃ ಸರ್ವೇ' ಎಂಬಂತೆ, ಈ ಯೋಗದಲ್ಲಿ ಪ್ರಾರಂಭಿಸಿದ ಸಕಲ ವ್ಯವಹಾರಗಳಿಗೂ 'ಆರೋಗ್ಯಂ ನೃಪಮಾನನಂ' ಎಂಬಂತಹ ಸಕಲ ಇಷ್ಟಾರ್ಥಗಳೂ ಸಿದ್ಧಿಸುವ ಫಲ ಇರುವುದು. ಆದರೆ ಇದಕ್ಕೆ ನಿಮ್ಮ ತಾರಾಬಲ ವನ್ನು ಹೊಂದಿಸಿಕೊಳ್ಳುತಕ್ಕದ್ದು**



**ಮೇಷ ರಾಶಿ : 'ಬುದ್ಧಿರ್‌ಬಲಂ ಯಶೋಧೈರ್ಯಂ'** ಎಂಬಂತೆ ಎಲ್ಲದಕ್ಕೂ ಬುದ್ಧಿಬಲವೇ ಮುಖ್ಯವೆನ್ನುವರು. ಸ್ನೇಹಿತರನ್ನು ನಂಬುವ, ಸಂಚಾರಶೀಲರಾಗಿರುವ, ಚಂಚಲಚಿತ್ತರಾಗಿರುವ ನೀವು ಅದೃಷ್ಟಶಾಲಿಗಳು,



**ವೃಷಭ** : ವೃಷಭ ಸ್ಥಿರ ರಾಶಿಯಾಗಿರುವುದರಿಂದ ಸ್ಥಿರ ಗುಣವುಳ್ಳವರು, ದಾನಶೀಲರು, ಗುಪ್ತಕಾರ್ಯ ನಡೆಸುವವರು ಎಲ್ಲರಿಗೂ ಬೇಕಾದವರಾಗಿ, ಪರೋಪಕಾರಿಗಳಾಗಿರುವಿರಿ. ವ್ಯಯದಲ್ಲಿ ರಾಹು, ಎರಡರಲ್ಲಿ ರವಿ ಹೀಗಾಗಿ ಆಯವ್ಯಯದ ಬಗ್ಗೆ ಜಾಗ್ರತರಾಗಿರುವುದುತ್ತಮ.



**ಮಿಥುನ : 'ವಿದ್ಯಾವಿನಯ ಸಂಪನ್ನೇ'** ಎಂಬಂತೆ ವಿದ್ಯಾವಂತರು, ವಿನಯಶಾಲಿಗಳು, ವಿಷಯಾಸಕ್ತರು, ಅಲಂಕಾರ ಪ್ರಿಯರು, ಪರೋಪದೇಶಪಂಡಿತರು, ಕಲ್ಪನಾಚತುರರು, ತಾರ್ಕಿಕರು, ಕವಿಕಾವ್ಯಾಸಕ್ತರು, ಸಂಚಾರಪ್ರಿಯರು, ಜನಾನುರಾಗಿ ಗಳಾಗಿ ಅದೃಷ್ಟಶಾಲಿಗಳಾಗಿರುವಿರಿ. ಜನ್ಮದ ರವಿಯಿಂದಾಗಿ ಆರೋಗ್ಯದ ಬಗ್ಗೆ ಜಾಗ್ರತೆ ಇರುವುದುತ್ತಮ.



**ಕರ್ಕಾಟಕ : 'ಕ್ಷಣಂಚಿತ್ತಂಕ್ಷಣಂಪಿತ್ತಂ'** ಎಲ್ಲವೂ ಕ್ಷಣಿಕವಾದ ಗುಣದಿಂದ ಕೂಡಿರುವಿರಿ. ಕ್ಷಣಿಕವಾದವನ್ನು ಮಂಡಿಸುವಿರಿ. ಉದಾರಿಗಳು, ವಿಲಕ್ಷಣರು, ಸ್ನೇಹಶೀಲರು, ವಾಚಾಳಿಗಳು, ರಾಜಕೀಯದಿಂದ ಹೆಸರನ್ನು ಗಳಿಸುವವರು ಆಗಿದ್ದರೂ ಆರ್ಥಿಕ ತೊಂದರೆಯ ಬಗ್ಗೆ ಜಾಗ್ರತರಾಗಿರುವುದುತ್ತಮ



**ಸಿಂಹರಾಶಿ : 'ವಿಕ್ರಮಾರ್ಜಿತ ಸತ್ವಸ್ಯ ಸ್ವಯಮೇವ ಮೃಗೇಂದ್ರತಾ'** ಎಂಬಂತೆ ನೀವು ಧೈರ್ಯಶಾಲಿಗಳು, ಧೈರ್ಯದಿಂದಲೇ ಮುನ್ನುಗ್ಗುವವರು. ಯಾರಿಗೂ ತಲೆಬಾಗಲಾರರು. ಸ್ವಯಂ ಆಗಿ ಸ್ಥಾನಮಾನ ಗಳಿಸಿಕೊಳ್ಳುವವರು, ಪಂಡಿತರು, ದಷ್ಟಪುಷ್ಟರು, ಗಂಭೀರ ನಡೆಯವರು, ಉಪಕಾರಿಗಳಿಗೆ ಉಪಕಾರಿಗಳು, ಅಪಕಾರಿಗಳಿಗೆ ಅಪಕಾರಿಗಳು, ಗೌರವ ಕೊಟ್ಟರೆ ಗೌರವ ಕೊಡುವವರು ಆಗಿರುತ್ತೀರಿ. ಆದರೂ ಅಷ್ಟಮದ ಕುಜ ಗುರುಗಳು ಸ್ವಲ್ಪ ಹಿನ್ನಡೆಯನ್ನು ಸೂಚಿಸುವುದಕ್ಕೆ ಜಾಗ್ರತರಾಗಿರುವುದುತ್ತಮ.



**ಕನ್ಯಾರಾಶಿ :'ಸ್ತ್ರೀತಿನಾಮೈತಿಪೇಶಲಂ'** ನಿಮ್ಮ ಮಾತು, ಆಕೃತಿ, ಕೃತಿ ಎಲ್ಲರಿಗೂ ಅಪ್ಯಾಯಮಾನವಾಗಿರುವುದು. ಇದೇ ನಿಮ್ಮ ಬಂಡವಾಳ. ಪರದೇಶವಾಸ, ಪರಗೃಹವಾಸದಿಂದ ಅನುಕೂಲ ಉಳ್ಳವರಾಗುವಿರಿ. ವಿದ್ಯಾವಿನೋದ ಪಟುಗಳಾಗಿರುವಿರಿ. ಬುದ್ಧಿ ಚೌಕಾಶಿ ಉಳ್ಳವರು. ವ್ಯವಹಾರದಿಂದೂ ಲಾಭ ಉಳ್ಳವರು. ಗುರುಬಲವಿದೆ. ಇದರಿಂದ ಇಷ್ಟಾರ್ಥ ಸಿದ್ಧಿಸುವುದು.

---

**'ಬಹುಋಷಿಮತಂ ಭವದ್ಭಿರನುಜ್ಞಾತಂ' ಎಂಬಂತೆ ಜ್ಯೋತಿಶ್ಶಾಸ್ತ್ರವನ್ನು ಸೂರ್ಯಾದಿ ಹದಿನೆಂಟು ಜನ ಋಷಿಮುನಿಗಳು ವಿವರಿಸಿರುತ್ತಾರೆ. ಮೂಲಭೂತವಾದ ಸಿದ್ಧಾಂತಗಣಿತಾದಿಗಳು ಒಂದೇ ಇದ್ದರೂ ಫಲಪ್ರವಚನದಲ್ಲಿ ತಾರತಮ್ಯಗಳಿರುವುದು. ಹೆಚ್ಚಿನವರು ಚಂದ್ರರಾಶಿಯನ್ನು ಇಟ್ಟುಕೊಂಡು ರಾಶಿಫಲ ಗುರುಬಲಗಳನ್ನು ಹೇಳಿರುವರು. ಯವನಜಾತಕದಲ್ಲಿ ಸ್ಫುಜಿದ್ವಾಜರು ಪ್ರತಿಗ್ರಹಳಿಂದಲೂ ಅವರವರ ಗೋಚರ ಫಲಾದಿಗಳ ಕ್ರಮವನ್ನೂ ಹೇಳಿರುವರು.**



**ತುಲಾ ರಾಶಿ:** ನೀವು ಸಧನ್ಯರು, ಸತ್ಯಕ್ಕಾಗಿ, ಧರ್ಮಕ್ಕಾಗಿ, ನ್ಯಾಯಕ್ಕಾಗಿ ಹೋರಾಡುವವರು. ಪಂಚಾಯತ್‌ದಾರರು. ಸಮಾಜ ದಲ್ಲಿ ಶಾಂತಿಗಾಗಿ ಪ್ರಯತ್ನಿಸುವವರು. ದೇವರಲ್ಲಿ, ಬ್ರಾಹ್ಮಣರಲ್ಲಿ, ಸಾಧುಸಂತರಲ್ಲಿ ಗೌರವ ಉಳ್ಳವವರು, ವ್ಯವಹಾರ ಚತುರರು, ಧನಿಕರು, ವಿಚಾರಶೀಲರು ಮತ್ತು ಜನಾನುರಾಗಿಗಳು ಆಗಿರುವಿರಿ. ಆದರೆ ಪಂಚಮಶನಿ ಮತ್ತು ಆರರ ಗುರುವಿನಿಂದಾಗಿ ಏನೋ ಕಳವಳ ಉಳ್ಳವರಾಗುವುದಕ್ಕೆ ಜಾಗ್ರತರಾಗಿರುದುತ್ತಮ.



**ವೃಶ್ಚಿಕ ರಾಶಿ** : ನಾರದರಂತೆ ಸಂಚಾರಿಗಳು, ಅಪರನಾರದರು. ದೇವತೆಗಳ ಮೇಲೆ ದೈತ್ಯರನ್ನು, ದೈತ್ಯರ ಮೇಲೆ ದೇವತೆಗಳನ್ನು ಎತ್ತಿಕಟ್ಟಿ ಚಂದ ನೋಡುವವರ ಸ್ವಭಾವದಂತೆ ಸ್ವಭ್ಭಾವವುಳ್ಳವರು, ಪರಪುಷ್ಟಜೀವಿಗಳು, ಪರರ ಸ್ವತ್ತೆಂದರೆ ತಮ್ಮ ಸ್ವತ್ತೆಂಬಂತೆ ದಾಕ್ಷಿಣ್ಯ ವಿಲ್ಲದೆ ಉಪಯೋಗಿಸಿಕೊಳ್ಳುವವರು, ಕಣ್ಣಿಗೆ ಕೈ ಹಾಕಿ ಮಾತನಾಡು ವವರು, ತನ್ನ ತಪ್ಪಿಲ್ಲವೆಂದು ಬಿಂಬಿಸಿ ಬದುಕುವವರು, ಗುರುಬಲ ಇರೋದರಿಂದ ಬಿಂದಾಸ್ ಜೀವನ ನಡೆಸುವಿರಿ. ಇಷ್ಟೆಲ್ಲ ಇದ್ದರೂ ಆರೋಗ್ಯ ಕೈಕೊಡುವ ಬಗ್ಗೆ ಜಾಗ್ರತರಾಗಿರುವುದುತ್ತಮ.



**ಧನುರಾಶಿ : 'ನಿನ್ನಕಣ್ಣ ನೋಟದಲ್ಲಿ ನೂರು ಆಸೆ ಕಂಡೆನು'** ಎಂಬಂತೆ ಕಣ್‌ಸನ್ನೆಯಿಂದಲೇ ಎಲ್ಲ ಕೆಲಸಗಳನ್ನು ಮಾಡಿಸಿಕೊಳ್ಳು ವವರು, ಕರ್ಣನಂತೆ ಚುರುಕುಬುದ್ಧಿಯುಳ್ಳವರು, ಒಂದು ಕೆಲಸ ಕ್ಕೆಂದು ಹೋದರೆ ನಾಲ್ಕಾರು ಕೆಲಸಗಳನ್ನು ಮಾಡಿಕೊಂಡು ಬರುವವರು, ಮುಂಗೋಪಿಗಳು, ಉದಾರಿಗಳಾಗಿರುವಿರಿ. ಗಾಡ್ ಫಾದರ್ ಸಿಕ್ಕಿದರೆ ಲೋಕ ವಿಖ್ಯಾತರಾಗುವಿರಿ. ಗುರುಬಲ ಚೆನ್ನಾಗಿದೆ. ಆದರೆ ಸಪ್ತಮದರವಿ 'ಸ್ತ್ರೀಭಿರ್ಗತಃ ಪರಿಭವಂ' ಎಂಬಂತೆ ಸ್ತ್ರೀ ನಿಮಿತ್ತವಾಗಿ ತೊಂದರೆ ಬರಬಹುದು. ಅಪವ್ಯಯಾದಿಗಳಾಗುವ ಬಗ್ಗೆ ಜಾಗ್ರತರಾಗಿರಿ.



**ಮಕರ ರಾಶಿ** :ವಿಪರೀತ ಬುದ್ಧಿವಂತರು, ದೇಹಕ್ಕಿಂತ ತಲೆಯೇ ಮುಖ್ಯ ಎನ್ನುವವರು, ನರಿಬುದ್ಧಿಯವರು, ಧಾರ್ಮಿಕರಂತಿರುವ ಧರ್ಮಧ್ವಜರು, ಕಲಾಸಕ್ತರು, ಕಲಾವಲ್ಲಭರು, ಸಕಾಲದಲ್ಲಿ ಮಿಂಚುವವರು, ಒಳಪೊಲ್ಸ ಅಂದರೆ ಲಾಭವುಳ್ಳವರು ಆಗಿರುತ್ತೀರಿ. ಪರಿಶ್ರಮ ಎಲ್ಲರದ್ದು, ಲಾಭ ನಿಮ್ಮದು. ಇದು ನಿಮ್ಮ ರಾಶಿ ಗುಣ. ದೇವರುಕೊಟ್ಟ ವರ. ನೆಮ್ಮದಿಯಿಂದ ಇರುವಿರಿ. ಆದರೆ ಎರಡನೇ ಮನೆಯ ಶನಿಯಿಂದ ಆಯಕ್ಕಿಂತ ವ್ಯಯ ಜಾಸ್ತಿಯಾಗಬಹುದು.



**ಕುಂಭ ರಾಶಿ:** ಆಜಾನುಬಾಹುಗಳಾದ ನೀವು ಕಟ್ಟುಮಸ್ತಾದ ಶರೀರ ಉಳ್ಳುವರು. ತೂಕದ ಮಾತುಳ್ಳವರು, ಶಾಸ್ತ್ರ ಜ್ಞಾನಿಗಳು, ಕಲಾಸಕ್ತರು, ಕಲಾವಲ್ಲಭರು, ಲೇಖಕಪ್ರಿಯರು, ಸಭ್ಯರು ಎಲ್ಲವನ್ನೂ ಅಳೆದು ತೂಗಿ ನೋಡಿ ಕೆಲಸ ಮಾಡುವವರು, ಮಾಡಿಸುವವರು, ವೇದವಾದರತರು, ಪ್ರತಿವಾದಿ ಭಯಂಕರರು, ವಾಕ್‌ಚಾತುರ್ಯವುಳ್ಳವರಾಗಿರುವಿರಿ. ಜನ್ಮ ಶನಿಯಿಂದಾಗಿ ಆರೋಗ್ಯದ ಬಗ್ಗೆ ಜಾಗ್ರತೆ ಇರುವುದುತ್ತಮ.



**ಮೀನರಾಶಿ** : ಚಂಚಲಚಿತ್ತರು, ಬೇಕಿದ್ದರೆ ಮಾತನಾಡುವವರು, ಪರೋಪಕಾರಿಗಳು, ಪರಪುಷ್ಟರು, ಅಶಾಂತರು, ಸುಂದರರು, ಚಿಂತಾತುರರು, ಎಲ್ಲದರಲ್ಲೂ ಲೆಕ್ಕಾಚಾರವಿದ್ದು ಕೆಲಸ ಮಾಡುವವರು ಆಗಿರುತ್ತೀರಿ. ಗುರುಬಲವಿದ್ದರೂ ವೃಥಾ ತಿರುಗಾಟ, ದೇಹಾಯಾಸ, ಅತೀ ಖರ್ಚುಗಳಾಗಬಹುದು, ಅಷ್ಟಮದ ಕೇತುವಿನಿಂದಾಗಿ ಇದ್ದಕ್ಕಿದ್ದಂತೆ ವ್ಯವಹಾರಗಳೆಲ್ಲ ನಿಂತುಹೋಗುವ ಬಗ್ಗೆ ಜಾಗ್ರತ ರಾಗಿರುವುದುತ್ತಮ.

**ಸರ್ವೇಜನಾಃ ಸುಖಿನೋಭವಂತು, ಶುಭಮಸ್ತು.**

**ಜಾಹಿರಾತು**

## ಬದರಿನಾಥ ಯಾತ್ರಾ ಸಂಘ, ಬೆಳಗಾವಿ-ಬೆಂಗಳೂರು ಇವರಿಂದ ಪಕ್ಷಮಾಸದ ಪ್ರಯುಕ್ತ ಪವಿತ್ರ ಮೋಕ್ಷಧಾಮಗಳ ಬದರಿನಾಥ ಧಾರ್ಮಿಕ ಯಾತ್ರೆ

★ ಉತ್ತರಭಾರತ ಯಾತ್ರೆ ದಿ. 08/09 ರಿಂದ 02/10/2022 ರವರೆಗೆ : (ರೂ. 28000/-) ಬೆಳಗಾವಿಯಿಂದ ವಿಜಯವಾಡಾ, ಮಾಯಾ (ಹರಿದ್ವಾರ), ಕಾಶಿ, ಜೈಪುರ, ಪುರಿ, ಕೋನಾರ್ಕ (ಐಚ್ಛಿಕ), ದ್ವಾರಾವತಿ (ದ್ವಾರಕಾ), ಗಯಾ, ಅಲಹಾಬಾದ, ಬದರಿನಾಥ, ಕೇದಾರನಾಥ (ಕೇದಾರನಾಥಗೆ ಹೋಗಲಿಚ್ಛಿಸುವವರು ರೂ. 7000/- ನ್ನು ಪ್ರತ್ಯೇಕವಾಗಿ ಕೊಡಬೇಕು. ಇದರಲ್ಲಿ ಬಸ್, ಚಹಾ/ಕಾಫಿ, ಊಟ ಮತ್ತು ವಸತಿ, ದರ್ಶನಕ್ಕಾಗಿ ಅಂದರೆ ಸೀತಾಪೂರ-ಗೌರಿಕುಂಡದಿಂದ 28 ಕಿ.ಮೀ. ನಡೆದುಕೊಂಡು ಹೋಗಿ ಬರಬೇಕು.) (ಡೋಲಿ-ಕುದುರೆ-ಹೆಲಿಕಾಪ್ಟರ್ ಖರ್ಚು ಪ್ರತ್ಯೇಕ) ಮಾತೃಗಯಾ, ಸೋಮನಾಥ-ಬೆಳಗಾವಿ.(ಶೇರಿಂಗ ರೂಮ್ ಮತ್ತು ಸಾಮಾನ್ಯ ವಸತಿ ವ್ಯವಸ್ಥೆ ಇರುತ್ತದೆ. ಪ್ರತ್ಯೇಕ (ಸೆಪರೇಟ್) ವಸತಿಗಾಗಿ ಖರ್ಚು ಪ್ರತ್ಯೇಕ)

★ ಪರಮ ಪವಿತ್ರ ಶ್ರೀಕ್ಷೇತ್ರ ಪುರಿ ಶ್ರೀ ಜಗನ್ನಾಥನ ಸನ್ನಿಧಿಯಲ್ಲಿ ಶ್ರೀಮದ್‌ಭಾಗವತ ಸಪ್ತಾಹ 09/10/2022 ರಿಂದ 16-10-2022 ರವರೆಗೆ ಪಂಡಿತ ಪಂಢರೀನಾಥಾಚಾರ್ಯ ಗಲಗಲಿಯವರ ಶಿಷ್ಯರಾದ ಪಂಡಿತ ವೆಂಕಟನರಸಿಂಹಾಚಾರ್ಯ ಜೋಶಿ, ಧಾರವಾಡ (ಗುಡೇಬಲ್ಲೂರ ಇವರಿಂದ) ಸೀಟೊಂದಕ್ಕೆ (ರೂ. 12,000/- 2x2 ಬೆಡ್ಸ್ ) ಕೇವಲ ಜಗನ್ನಾಥಪುರಿಗೆ ಮಾತ್ರ (ಅಡ್ವಾನ್ಸ್ ರೂ. 2,000/-)

★ ರಾಮೇಶ್ವರ ಯಾತ್ರೆ (ರೂ. 20000) ದಿ. 29-11-2022 ರಿಂದ 10-12-2022 ರವರೆಗೆ :ಬೆಳಗಾವಿಯಿಂದ ವಿಷ್ಣು ಮತ್ತು ಶಿವ ಕಂಚಿ, ತಿರುಕೋಯಿಲೂರ್, ಶ್ರೀಮುಷ್ಣಂ, ಚಿದಂಬರಮ್, ಕುಂಭಕೋಣಮ್, ನಾಚಾರ ಗುಡಿ, ತಂಜಾವೂರ, ಶ್ರೀರಂಗಮ್, ಜಂಬುಕೇಶ್ವರ, ಮಧುರೈ, ರಾಮೇಶ್ವರಂ, ಧನುಷ್ಕೋಟಿ, ಸುಚಿಂದ್ರಂ, ಕನ್ಯಾಕುಮಾರಿ, ತಿರುವನಂತಪುರಮ್, ಗುರುವಾಯುರ್-ಬೆಳಗಾವಿ. (ಜನರಲ್ ವಸತಿ ಇರುತ್ತದೆ. ರೂಮ್ ಖರ್ಚು ಪ್ರತ್ಯೇಕ)

★ ಗಂಗಾಸಾಗರ ಕಲ್ಕತ್ತಾ ಯಾತ್ರೆ (ರೂ. 28000 ಬೆಳಗಾವಿ ಮತ್ತು ಬೆಂಗಳೂರಿನಿಂದ ಬೆಂಗಳೂರು) ದಿ. **10-11-2022 ರಿಂದ 27-11-2022 ರವರೆಗೆ**- ಜಗನ್ನಾಥಪುರಿ, ಕೋನಾರ್ಕ, ಗಂಗಾಸಾಗರ, ಕಲ್ಕತ್ತಾ, ದಾರ್ಜಿಲಿಂಗ್, ಗ್ಯಾಂಗ್‌ಟೋಕ. (2x2, 3x3 ರೂಮ್-ಕೂಲಿ ವ್ಯವಸ್ಥೆ ಇರುತ್ತದೆ.)

ಮತ್ತು ಪುರಿಯಿಂದ ಕಲ್ಕತ್ತಾವರೆಗೆ ಮಾತ್ರ (ರೂ. 25,000) ದಿ. 12/11/ ರಿಂದ 26/11/2022 ರವರೆಗೆ) : ಗಂಗಾಸಾಗರ, ಕೋನಾರ್ಕ, ಕಲ್ಕತ್ತಾ, ದಾರ್ಜಿಲಿಂಗ್, ಗ್ಯಾಂಗ್‌ಟೋಕ, (2x2, 3x3 ರೂಮ್-ಕೂಲಿ ವ್ಯವಸ್ಥೆ ಇರುತ್ತದೆ.)

ಸೂಚನೆ : ಪ್ರತಿದಿನ ಎರಡು ಬಾರಿ ಚಹಾ/ಕಾಫಿ, ಎರಡು ಊಟ, ಮುಂಜಾನೆ ಉಪಹಾರ ಕೊಡಲಾಗುವುದು. ಯಾತ್ರೆಗೆ ಬರುವವರು ಮರಳಿಸಲಾಗದ ಮುಂಗಡ ಹಣ ರೂ. 6000/- ಗಳನ್ನು ತುಂಬಿ ಇಂದೇ ತಮ್ಮ ಸೀಟನ್ನು ಕಾಯ್ದಿರಿಸಿಕೊಳ್ಳಬೇಕಾಗಿ ವಿನಂತಿ. ಎಲ್ಲ ಯಾತ್ರೆಗಳು ಬೆಳಗಾವಿ-ಬೆಂಗಳೂರಿನಿಂದ ಪ್ರಾರಂಭವಾಗುತ್ತವೆ. ತಮ್ಮ ಊರಿನವರೆಗೆ ರೇಲ್ವೆ ಟಿಕೇಟ್‌ನ ರಿಝರ್ವೇಶನ್ ಮಾಡಿ ಕೊಡಲಾಗುವುದು.

**ಯಾತ್ರಿಕರು ಯಾತ್ರೆಯ ದಿನಾಂಕದಿಂದ 120 ದಿನಗಳ ಮುಂಚಿತವಾಗಿ ಬುಕ್ ಮಾಡಿದಲ್ಲಿ ಖಚಿತವಾಗಿ ರಿಝರ್ವೇಶನ್ ಸಿಗುತ್ತದೆ, ಗಮನಿಸಿ.**

**ಸಂಪರ್ಕಿಸಿ : ಶ್ರೀ ರಾಜೀವ ಜೋಶಿ, ಬೆಳಗಾವಿ. ಫೋನ್ 9448347054**
**ಪದ್ಮಾ ರಾವ್, ಬೆಂಗಳೂರು 9103097587**

**ವಿ.ಸೂ. ಪ್ರತ್ಯೇಕವಾಗಿ 30 ಜನ ಸಿದ್ಧರಾದರೆ ನೀವು ಇಚ್ಛೆಪಡುವ ಸ್ಥಳಗಳ ಯಾತ್ರೆಯನ್ನು ಮಾಡಿಸಲಾಗುವುದು**

Note : Pick-drop from Bengalooru, Mysore, Hubli, Gulbarga, Hyderabad, Solapur, Pune, Mumbai, Chennai

## ವಿಪ್ರನುಡಿಗೆ ಚಂದಾದಾರರಾಗಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ತಮಗೆ ತಲುಪಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಸದಸ್ಯರಾಗಬೇಕಾಗಿ ಕೋರಿಕೆ. ಈ ವಿಪ್ರನುಡಿ ಸದಸ್ಯರ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗ ಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.

ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು.
ಲೇಖನ ವರದಿಗಳನ್ನು ಕಳುಹಿಸಬೇಕಾದ
ಇ–ಮೇಲ್ : e mail : vipranudi@gmail.com

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/- ಸಂದಾಯಮಾಡಿ ಚಂದಾದಾರರಾಗಿ**

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.) ವಧು–ವರ ಮಾಹಿತಿ ಕೇಂದ್ರ, ಬೆಂಗಳೂರು

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು–70.
ದೂರವಾಣಿ : 080–26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್

**ಸದಸ್ಯರು**

ಶ್ರೀಮತಿ ರಮಾ ಶ್ರೀನಾಥ್, ಶ್ರೀಮತಿ ಪಾರ್ವತಿ ಸ್ವಾಮಿ
ಶ್ರೀಮತಿ ಗಾಯತ್ರಿ ರಾವ್

ಜಾಹಿರಾತು

**ಶ್ರೀ ಗುರು ರಾಘವೇಂದ್ರ ಜ್ಯೋತಿಷ್ಯ ಕೇಂದ್ರ**



ರಾಷ್ಟ್ರೀಯ ಮಟ್ಟದಲ್ಲಿ ಜನ ಮನ್ನಣೆ ಪಡೆದಿರುವ ತ್ರಿಕಾಲ ಜ್ಞಾನಿಗಳು
ಜ್ಯೋತಿಷ್ಯ ಶಿರೋಮಣಿ ಕೇರಳದ ಸರ್ವಸಿದ್ಧಿ ಸಾಧಕ ವೇದಬ್ರಹ್ಮ

**ಶ್ರೀ ಶ್ರೀ ವಿಜಯೇಂದ್ರ ಗುರೂಜಿ**

ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನದ ಆರಾಧಕರು ಜಾತಕ, ಹಸ್ತ, ಫೋಟೋ, ಮುಖಲಕ್ಷಣ, ಗೋಚಾರಫಲ, ಪಂಚಪಕ್ಷಿ ಶಾಸ್ತ್ರ, ತಾಳೆಗರಿ ಶಾಸ್ತ್ರ ಅಂಜನ ಶಾಸ್ತ್ರ, ದೈವಪ್ರಶ್ನೆ ನೋಡಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿತಿಳಿಸುತ್ತಾರೆ. ಶ್ರೀ ಗುರುರಾಯರ ಪಾದಸಾಕ್ಷಿ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಧರ್ಮನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲವೇ ದಿನದಲ್ಲಿ ಶಾಶ್ವತ ಪರಿಹಾರವನ್ನು ಮಾಡಿಕೊಡುತ್ತಾರೆ.

ಮಕ್ಕಳ ಅಸಭ್ಯವರ್ತನೆ, ವಿವಾಹ ವಿಳಂಬ, ಡೈವರ್ಸ್, ಸಂತಾನ ಫಲ, ಉದ್ಯೋಗ, ವ್ಯಾಪಾರದಲ್ಲಿ ನಷ್ಟ ಹಣಕಾಸಿನ ಸಮಸ್ಯೆ, ದಾಂಪತ್ಯ ಕಲಹ, ಆರೋಗ್ಯ ಸಮಸ್ಯೆ, ಪ್ರೇಮಸಂಬಂಧ, ಮಾನಸಿಕ ಕಿರಿಕಿರಿ, ಶತ್ರುಗಳಿಂದ ತೊಂದರೆ, ಅತ್ತೆ-ಸೊಸೆ ಕಿರಿಕಿರಿ, ಜಾಗ-ಜಮೀನು ಸಮಸ್ಯೆ, ಪ್ರೇತ ಬಾಧೆ, ದುಷ್ಟಶಕ್ತಿ ತೊಂದರೆ, ನಿಮ್ಮ ಜೀವನದ ಸರ್ವ ದಾರಿದ್ರ ಸಮಸ್ಯೆಗಳಿಂದ

**ಮುಕ್ತಿ ಹೊಂದಲು ನಿಮಗಿದು ಸುವರ್ಣಾವಕಾಶ**

**ಅತಿ ಶೀಘ್ರ ವಿವಾಹ ಪ್ರಾಪ್ತಿಯಾಗಲು ಶಿವ ಪಾರ್ವತಿ ಸ್ವಯಂವರ ಕವಚವನ್ನು ಸಿದ್ಧಿ ಮಾಡಿಕೊಡುತ್ತಾರೆ. 5 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ**

**ಮೊ. : 9945222228**

ಬರುವ ಮೊದಲು ಭೇಟಿಯ ಸಮಯ ಖಚಿತಪಡಿಸಿಕೊಂಡು ಬನ್ನಿ ನಿಮ್ಮ ಭವಿಷ್ಯದ ಕನಸು ನನಸಾಗಲು ಇಂದೇ ಸಂದರ್ಶಿಸಿ.

ಸಮಯ : ಬೆಳಗ್ಗೆ 10.45 ರಿಂದ 2.30, 3.00 ರಿಂದ 9.00ರವರೆಗೆ

ನಂ.157, ಶ್ರೀರಾಮ ಪ್ಲಾಜಾ, ಸತೀಶ್ ಸ್ಟೋರ್ಸ್ ಎದುರು, ಬಸವನಗುಡಿ, ಬೆಂಗಳೂರು-4.

## ಸೂಚನೆ

ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಈಗಿರುವ ಸದಸ್ಯರ ಪಟ್ಟಿಯನ್ನು ಪರಿಶೀಲಿಸಿ ಪರಿಷ್ಕರಣೆ ಮಾಡಲು ಶ್ರೀ ವಿ. ಸತ್ಯೇಂದ್ರರವರನ್ನು ಸಂಚಾಲಕರನ್ನಾಗಿ ನೇಮಿಸಿ ಉಪಸಮಿತಿಯನ್ನು ರಚಿಸಿರುತ್ತಾರೆ.

ಸಂಚಾಲಕರು ಮಹಾಸಭಾದ ಕೇಂದ್ರಕಾರಿಣಿ ಸಭೆಯ ಸದಸ್ಯರನ್ನು ಸಂಪರ್ಕಿಸಿ ತಮ್ಮ ವ್ಯಾಪ್ತಿಗೆ ಬರುವ ಮಹಾಸಭಾ ಸದಸ್ಯರ ವಿವರವನ್ನು ಸಲ್ಲಿಸುವಂತೆ ಕೋರುತ್ತೇವೆ. ದಯವಿಟ್ಟು ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :

ವಿ. ಸತ್ಯೇಂದ್ರ -9844001238

ಎಸ್. ಶ್ರೀಧರಮೂರ್ತಿ-ಪ್ರಧಾನ ಕಾರ್ಯದರ್ಶಿ

## ಉದಾರ ದೇಣಿಗೆ ನೀಡಲು ಮನವಿ

ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಸಮರ್ಥ ಮಾರ್ಗದರ್ಶನದಲ್ಲಿ ಗಾಯತ್ರೀ ಭವನ ಮತ್ತು ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿನಿಲಯದ ನವೀಕರಣವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾಮಗಾರಿಗೆ ಸಾಕಷ್ಟು ಧನ ಸಂಪನ್ಮೂಲದ ಅಗತ್ಯವಿದೆ. ಈ ದಿಶೆಯಲ್ಲಿ ತಮ್ಮ ಸಹಾಯವನ್ನು ನಿರೀಕ್ಷಿಸುತ್ತೇವೆ. ಮಹಾಸಭಾದ ಅಂಗಸಂಸ್ಥೆಯಾದ ಸಪ್ತರ್ಷಿ ಫೌಂಡೇಷನ್ ಹೆಸರಿನಲ್ಲಿ ತಾವು ಚೆಕ್ ಅನ್ನು ನೀಡಬಹುದು. ತಾವು ಉದಾರವಾಗಿ ನೀಡಿದ ಹಣಕ್ಕೆ 80ಜಿ ತೆರಿಗೆ ವಿನಾಯಿತಿ ಇದೆ. ತಾವು ನಮ್ಮೊಂದಿಗೆ ಈ ಕಾರ್ಯದಲ್ಲಿ ಕೈಜೋಡಿಸಬೇಕಾಗಿ ಸವಿನಯ ಕೋರಿಕೆ.

**ಬ್ಯಾಂಕ್ ವಿವರ**

| | | |
|---|---|---|
| ಬ್ಯಾಂಕ್ | : | ಕರ್ನಾಟಕ ಬ್ಯಾಂಕ್ |
| ಖಾತಾ ಹೆಸರು | : | ಸಪ್ತರ್ಷಿ ಫೌಂಡೇಷನ್ |
| ಖಾತಾ ಸಂಖ್ಯೆ | : | 1072500102061001 |
| ಐಎಫ್ಎಸ್ಸಿ | : | KARB0000107 |
| ಶಾಖೆ | : | ಬನಶಂಕರಿ ಎರಡನೇ ಹಂತ, ಬೆಂಗಳೂರು |

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು-560 050.

## ಸ್ಥಳದ ಬಾಡಿಗೆ ಇರುವುದಿಲ್ಲ

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080-26793054 ಮೊಬೈಲ್ 8277433666**

ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ,
ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ
ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ,
ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

# ಬ್ರಹ್ಮಲೀನ ಗುರುಗಳಿಗೆ ಶ್ರದ್ಧಾಂಜಲಿ



ಶೃಂಗೇರಿಯ ಪೀಠ ಹೆಬ್ಬೂರಿನ ಕಾಮಾಕ್ಷಿ ಪೀಠದ ಗುರುಗಳಾದ ಶ್ರೀ ಮಾಧವಾಶ್ರಮ ಸ್ವಾಮಿಗಳು ದಿನಾಂಕ 29.05.2022ರಂದು ಬ್ರಹ್ಮೈಕ್ಯರಾದರು. ಶ್ರೀಗಳು ಬ್ರಹ್ಮೈಕ್ಯರಾಗಿರುವ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಭಕ್ತಿಪೂರ್ವ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

# ಉದಾರ ದೇಣಿಗೆ ನೀಡಿದ ಮಹನೀಯರು




ಡಾ॥ ಉದಯ್ ಬಿ. ಗರುಡಾಚಾರ್,
ಮಾನ್ಯ ಶಾಸಕರು, ಚಿಕ್ಕಪೇಟೆ ಕ್ಷೇತ್ರ ಇವರಿಂದ
ರೂ. 1,00,000 ಗಳ ಕೊಡುಗೆ
(ಚೆಕ್)ನ್ನು ಮಹಾಸಭೆಯ ಪರವಾಗಿ ಸ್ವೀಕರಿಸುತ್ತಿರುವ ಸತೀಶ್‌ರವರು



ಶ್ರೀ ಸುಬ್ಬನರಸಿಂಹ,
ಕಲ್ಪವೃಕ್ಷ ಛಾರಿಟಬಲ್ ಟ್ರಸ್ಟ್..
ರೂ. 1,00,000




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮೈಸೂರು ವಲಯ ಉಪಾಧ್ಯಕ್ಷರಾದ ಡಾ. ಬಿ.ಆರ್. ನಟರಾಜ್ ಜೊಯೀಸ್‌ರವರು ತಮ್ಮ ಮಾತೋಶ್ರೀಯವರ ಹೆಸರಿನಲ್ಲಿ 25.000 ರೂಗಳ ಚೆಕ್ ಅನ್ನು ವಿದ್ಯಾವಾಸಿನಿ ಮಹಿಳಾ ವಸತಿ ನಿಲಯದ ಹೆಣ್ಣು ಮಕ್ಕಳ ಊಟೋಪಚಾರಕ್ಕಾಗಿ ಅಧ್ಯಕ್ಷರಿಗೆ ನೀಡಿದರು. ಶ್ರೀಯುತರು ಪ್ರತಿವರ್ಷವೂ ಮಾತೋಶ್ರೀಯವರ ಹೆಸರಿನಲ್ಲಿ 25,000/= ರೂ.ಗಳನ್ನು ನೀಡುವುದಾಗಿ ವಾಗ್ದಾನ ಮಾಡಿದರು.

PERIODICAL RATE

VIPRANUDI KANNADA MONTHLY.
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 17-06-2022 Date of Publishing 9-06-2022

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar